
ನವಸಾಕ್ಷರ ಪುಸ್ತಕ ಮಾಲೆ ೧೪

ಊರಮ್ಮ ಮಾರಮ್ಮ

ಬಿ.ಎಸ್. ನಾಗರತ್ನಕುಮಾರಿ



ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

ಹಾ. ಮಾ. ನಾಯಕ
ಎಚ್. ನರಸಿಂಹಯ್ಯ
ಜಿ. ನಾರಾಯಣ
ಎಲ್. ಎಸ್. ಶೇಷಗಿರಿರಾವ್
ಶಾಂತರಸ
ಕೆ. ವಿ. ಸುಬ್ಬಣ್ಣ
ಗೊ. ರು. ಚನ್ನಬಸಪ್ಪ
ಪಿ. ಎಸ್. ಶಂಕರ್
ಶಿವಶಂಕರ ಹಿರೇಮಠ
ಆರ್. ಎಸ್. ರಾಜಾರಾಮ್
ಶ್ರೀಮತಿ ಎಲ್. ಜಿ. ಸುಮಿತ್ರ

ಸಂಪಾದಕ ಸಮಿತಿ

ಶ್ರೀಯುತರಾದ
ಎಸ್. ಜಿ. ನಾಗಲೋಟಿಮಠ
ಕೆ. ವಿ. ನಾರಾಯಣ
ಪುರುಷೋತ್ತಮ ಬಿಳಿಮಲೆ
ಕರೀಗೌಡ ಬೀಚನಹಳ್ಳಿ
ಅಮೃತ ಸೋಮೇಶ್ವರ
ಸಿ. ಆರ್. ಚಂದ್ರಶೇಖರ್
ಬಿ. ಎ. ಶ್ರೀಧರ
ಲಿಂಗದೇವರು ಹಳೆಮನೆ
ಭ. ಮಲ್ಲಿಕಾರ್ಜುನ
ಮಹಾಬಲೇಶ್ವರರಾವ್
ಭಕ್ತಪ್ರಿಯ
ಎಂ. ಪಿ. ಪರಮಶೇಖರಯ್ಯ
ಶ್ರೀಮತಿ ಉಷಾ ರಾಂಕುಮಾರ್

ಲೋಕಶಿಕ್ಷಣ ನಿರ್ದೇಶನಾಲಯ
ನವಸಾಕ್ಷರ ಪುಸ್ತಕ ಮಾಲೆ—೧೪

ಊರಮ್ಮ ಮಾರಮ್ಮ

ಬಿ. ಎಸ್. ನಾಗರತ್ನಕುಮಾರಿ

ಪ್ರಸಾರಾಂಗ
ಕನ್ನಡ ವಿಶ್ವವಿದ್ಯಾಲಯ
ಹಂಪಿ—೫೮೩ ೨೧೧

OORAMMA MAARAMMA : By B.S. Nagarathnakumari Published by The Director of Prasaranga, Kannada University, Hampi – 583 211, KARNATAKA.
First Impression 1994, Pp. ii + 26, Rs. 8.00

ಸಂಯೋಜನಾಧಿಕಾರಿ
ಎಚ್.ಎಸ್.ಶ್ರೀಮತಿ
ಪಠ್ಯಪುಸ್ತಕ ರಚನಾ ವಿಭಾಗ

ಪ್ರಕಾಶಕರು
ನಿರ್ದೇಶಕರು
ಪ್ರಸಾರಾಂಗ
ಕನ್ನಡ ವಿಶ್ವವಿದ್ಯಾಲಯ
ಹಂಪಿ—೫೮೩ ೨೧೧

ಮುಖಪುಟ ವಿನ್ಯಾಸ
ಕೆ. ಮಕಾಳಿ

ಬೆಲೆ: ರೂ ೮.೦೦

ಮುದ್ರಕರು
ಅಭಿಮಾನಿ ಪ್ರಕಾಶನ
೯೬, ಡಾ.ರಾಜಕುಮಾರ್ ರಸ್ತೆ,
ರಾಜಾಜಿನಗರ,
ಬೆಂಗಳೂರು—೫೬೦ ೦೨೧

ಊರಮ್ಮ ಮಾರಮ್ಮ

ಊರಮ್ಮ

'ಊರಮ್ಮ' ಎಂದರೆ ಊರಿನ ತಾಯಿ. ಮನೆಗೊಬ್ಬಳು ತಾಯಿ ಇರುತ್ತಾಳೆ. ಅವಳಿಗೆ ಗಂಡ, ಮಕ್ಕಳು ಮತ್ತು ಬಳಗ ಇರುತ್ತದೆ. ಊರಿನ ತಾಯಿ ಎಂದರೆ ಊರಿನ ದೇವತೆ. ಅವಳಿಗೆ ಊರಿನವರೆಲ್ಲ ಮಕ್ಕಳು, ಊರಿನ ರಕ್ಷಕಿ ಅವಳು.

'ಊರಪ್ಪ' ಏಕಿಲ್ಲ? ಯಾವ ಊರಿಗೆ ಹೋದರೂ ಊರಮ್ಮ, ಬೋರಮ್ಮ, ಮಾರಮ್ಮ, ಕಾಳಮ್ಮ ಎನ್ನುವ ದೇವತೆಯರು ಇರುತ್ತಾರೆ. ಅದೇ ರೀತಿ ಅಪ್ಪ ಎನ್ನುವ ದೇವತೆಗಳು ಇಲ್ಲ. ಬೀರಪ್ಪ ಎನ್ನುವ ದೇವತೆ ಇದ್ದಾನೆ. ಅವನು ಎಲ್ಲ ಊರುಗಳಲ್ಲೂ ಇಲ್ಲ. ಎಲ್ಲಿ ಕುರುಬ ಜನಾಂಗ ಇರುತ್ತದೋ ಅಲ್ಲಿ ಖಂಡಿತ ಅವನೇ ಊರಪ್ಪ. ಇತರ ಕಡೆ ಊರಪ್ಪ ಯಾಕಿಲ್ಲ?

ಪುರಾತನ ಕಾಲದಿಂದ ನಮ್ಮ ಸಮಾಜ ನಡೆದು ಬಂದ ರೀತಿಯನ್ನು ನೋಡಿ: ಮೊದಲಿಗೆ ಜನ ಅಲೆಮಾರಿಗಳು. ಸಿಕ್ಕ ಕಡೆ ಗೆಡ್ಡೆ-ಗೆಣಸು, ಹಣ್ಣು ಹಂಪಲು ತಿಂದು ಜೀವಿಸುತ್ತಿದ್ದರು. ಒಂದು ಕಡೆ ಇದ್ದು ತಿಂದರೆ ಅವು ಎಷ್ಟು ದಿನ ಬರುತ್ತವೆ?



ಊರಮ್ಮ

ಬೇರೊಂದು ಜಾಗವನ್ನು ಹುಡುಕಿ ಹೊರಟರು. ಅಲ್ಲಿಯೂ ಸಿಗದಿದ್ದಾಗ ಬೇರೊಂದು ಮಾರ್ಗವನ್ನು ಹಿಡಿಯಬೇಕಾಗಿ ಬಂತು, ಅಥವಾ ಒಂದೇ ರುಚಿ ಈ ಮಾನವನಿಗೆ ಹಿಡಿಸಲಿಲ್ಲವೇನೋ! ಬೇರೆ ಬೇರೆ ಕಡೆ ಬೇರೆ ಬೇರೆ ರೀತಿಯ ಆಹಾರವನ್ನು ಹುಡುಕಿ ಅವರು ಹೊರಟರು. ಗಂಡು ಹುಟ್ಟಿದಾಗಿನಿಂದ ಸಾಯುವವರೆಗೆ ಒಂದೇ ಥರ ಇರುತ್ತಾನೆ. ಅವನೇನು ಹೆರಬೇಕೆ? ಮಕ್ಕಳನ್ನು ಹಾಲುಣಿಸಿ ಸಾಕಬೇಕೆ? ಇದೆಲ್ಲ ಹೆಣ್ಣಿನ ಚಾಕರಿ ತಾನೆ! ಹೆಣ್ಣು, ಮಗುವಿಗೆ ಜನ್ಮ ಕೊಟ್ಟಾಗ ಒಂದು ಸ್ಥಳದಲ್ಲಿ ಆಕೆ ನಿಲ್ಲಬೇಕಾಯಿತು.

ಆಕೆ ನಿಂತ ಕಡೆ ಮನೆಯಾಯಿತು. ಅದೇ ಅವರ ನೆಲೆಯೂ ಆಯಿತು. ಕುಟುಂಬ ಎನ್ನುವುದು ಹುಟ್ಟಿತು; ಊರು ಎನ್ನುವುದು ಸ್ಥಾಪನೆಯಾಯಿತು.

ಗೆಡ್ಡೆ ಗೆಣಸು ಸಾಕಾಗದೆ ಗಂಡು ಬೇಟೆಗೆ ಹೊರಟ. ಅದು ಸಾಕಾಗದಿದ್ದಾಗ ದನಕರು ಸಾಕಲು ಹೊರಟ. ಅದೂ ಸಾಲದು ಎನಿಸಿದಾಗ ಬೇಸಾಯ ಶುರುಮಾಡಿದ. ಇನ್ನೂ ಹೆಚ್ಚು ಬೇಕೆನಿಸಿದಾಗ ವ್ಯಾಪಾರ ಮಾಡಲು ಹೊರಟ. ಮೊದಲ ಹಾಗೆ ಗಂಡ ಹೆಂಡಿರಿಗೆ ಮಾತ್ರ ಆಹಾರವಲ್ಲವಲ್ಲ! ಮನೆಯ ಮಕ್ಕಳು ಮರಿಗಳಿಗೆಲ್ಲ ಆಹಾರ ಬೇಕಲ್ಲವೇ? ಗಂಡು ಹೊರಗಡೆ ಹೋದ. ಇಂಥ ಸಮಯದಲ್ಲಿ ಹೆಣ್ಣು ಮನೆಯಲ್ಲೇ ಉಳಿದಳು. ಗಂಡನ ಜೊತೆ ಸ್ವಲ್ಪ ಹೊತ್ತು ಹೊರಗೆ ಹೋದರೂ ತಕ್ಷಣ ಮನೆಗೆ ಬರುತ್ತಿದ್ದಳು. ಮನೆಯಲ್ಲಿ ಮಕ್ಕಳು ಅಮ್ಮನಿಗಾಗಿ ಕಾಯುತ್ತವೆ ಅಲ್ಲವೇ?

ಮಕ್ಕಳಿಗೆ ಆಹಾರ ಕೊಡಲು ಮಾತ್ರ ತಾಯಿ ಮನೆಯಲ್ಲಿ ಉಳಿದಳು ಎಂದು ತಿಳಿಯಬೇಡಿ. ಅವುಗಳ ಆರೋಗ್ಯವನ್ನು ನೋಡಿಕೊಳ್ಳುವವರು ಯಾರು? ಈಗಿನಂತೆ ಪ್ರತ್ಯೇಕ ವೈದ್ಯರು ಇರಲಿಲ್ಲ. ತಾಯಿಯೇ ಮಕ್ಕಳಿಗೆ ಮೊದಲ ವೈದ್ಯೆಯಾಗಿದ್ದಳು. ಈಗಿನಂತೆ ಆಗ ಪೊಲೀಸ್ ಇಲಾಖೆ ಇರಲಿಲ್ಲ. ಮಕ್ಕಳು ಮರಿ ತಪ್ಪಿಸಿಕೊಳ್ಳದಂತೆ ತಾಯಿಯೇ ನೋಡಿಕೊಳ್ಳಬೇಕಿತ್ತು. ಮಕ್ಕಳನ್ನು ಮಾತ್ರವಲ್ಲ, ಮನೆಯನ್ನೂ, ಕೂಡಿ ಇಟ್ಟಿದ್ದ ಅಲ್ಪಸ್ವಲ್ಪ ದವಸ ಧಾನ್ಯಗಳನ್ನು ಅವಳು ಕಾಯ್ದು ಕೊಂಡಿರಬೇಕಿತ್ತು. ಆಗ ಓದುವ ವಿದ್ಯೆ ಇರಲಿಲ್ಲ. ನಡವಳಿಕೆ ಕಲಿಸುವುದು ಎಂಬ ವಿದ್ಯೆ ಇತ್ತು. ಅದನ್ನು ಕಲಿಸಿಕೊಡುವವರು ಯಾರು? ಅಪ್ಪ ಎನ್ನುವ ಪ್ರಾಣಿ ಸದಾ ಹೊರಗಡೆಯೇ ಇರುತ್ತದೆ. ಅಮ್ಮ ತಾನೇ ಆ ಕೆಲಸ ಮಾಡಬೇಕು. ತಾಯಿಯೇ ಮಗುವಿಗೆ ನಡವಳಿಕೆ ಕಲಿಸುತ್ತಿದ್ದಳು. ತಮ್ಮ ರೀತಿ, ನೀತಿ ಹೇಳಿಕೊಡುತ್ತಿದ್ದಳು. ಹೀಗೆ ಅಮ್ಮನೇ ಮೊದಲ ಗುರುವಾದಳು. ಮನೆಯೇ ಮೊದಲ ಪಾಠ ಶಾಲೆಯಾಯಿತು.

ನೋಡಿ, ಎಷ್ಟೊಂದು ವಿಧದಲ್ಲಿ ತಾಯಿ ಮೊದಲಿಗಳು! ಅವಳು ಹೆತ್ತ ತಾಯಿ; ಸಾಕಿದ ಪೋಷಕಿ; ರಕ್ಷಿಸಿದ ಪೊಲೀಸು; ವಿದ್ಯೆ ಕಲಿಸಿದ ಗುರು; ಆರೋಗ್ಯ ನೋಡಿಕೊಂಡ ವೈದ್ಯೆ. ಅಬ್ಬಬ್ಬ! ನಿಜಕ್ಕೂ ತಾಯಿ ಮೊದಲಿಗಳು. ಅವಳಿಂದಲೇ ಗಂಡು ಒಂದು ಕಡೆ ನೆಲೆ ನಿಂತ. ಅಲ್ಲಿ ಮನೆ ಮಠ ಊರು ಆಯಿತು. ಇಲ್ಲಿಂದಲೇ ಸಮಾಜ, ಊರು, ರಾಜ್ಯ ಎಲ್ಲ ಬೆಳೆದವು. ಒಂದು ದೊಡ್ಡ ಮಾನವ ಸಂಸ್ಕೃತಿ ಬೆಳೆಯಿತು. ಇದೆಲ್ಲ ಯಾರಿಂದ ಆಯಿತು? ಊರಮ್ಮನಿಂದ ಅಲ್ಲವೇ? ಹೀಗೆ ಕಾಡನ್ನು ಊರು ಮಾಡಿದವಳು ಊರಮ್ಮ. ಆದ್ದರಿಂದ ನಮ್ಮ ಜನ ಅವಳನ್ನೇ ಮೊದಲ ದೇವರು ಎಂದು ಮಾಡಿಕೊಂಡರು. ಪ್ರತಿ ಊರಿಗೊಂದು ಅಮ್ಮನ ಗುಡಿ ಆಯಿತು.

ತಾಯಿ ಊರಮ್ಮ ಆದುದಕ್ಕೆ ಇನ್ನೂ ಒಂದು ಕಾರಣ ಹೇಳುತ್ತಾರೆ. ಇತ್ತ ಕಡೆ ನಾಡಿನಲ್ಲಿ ಮನೆಗೆ ಯಜಮಾನಿ ತಾಯಿಯೇ ಆಗಿದ್ದಳು. ಮನೆ, ಮಠ, ಜಮೀನು ಎಲ್ಲದರ ಒಡತಿಯೂ ಅವಳೇ. ತಂದೆ ಎಂಬುವವನು ಒಂದು ಗುರುತು ಮಾತ್ರ ಆಗಿದ್ದ. ಸಂಪ್ರದಾಯದಂತೆ ಮದುವೆಯಾದ ಗಂಡ ಆಗಿದ್ದ. ಉಳಿದೆಲ್ಲವೂ ಅಮ್ಮನೇ ಆಗಿದ್ದಳು. ಅವಳೇ ಎಲ್ಲರ ಯಜಮಾನಿತಿ ಆಗಿದ್ದಳು. ರಕ್ಷಣೆಯೂ ಅವಳ ಪಾಲಿನ ಕೆಲಸವೇ; ದಾರಿ ತೋರುವವಳೂ ಅವಳೇ. ಹಾಗಿದ್ದ ಮೇಲೆ ಇಂಥ ಯಜಮಾನಿತಿಯನ್ನು ಜನ ಪ್ರೀತಿಸಬೇಕಲ್ಲವೇ? ಅವಳ ಕರುಣೆಗೆ ಕೃತಜ್ಞತೆ ತೋರಿಸಬೇಕಲ್ಲವೇ? ಆದ್ದರಿಂದಲೇ ಬರಬರುತ್ತ ಜನ ಅವಳನ್ನೇ ದೇವತೆಯನ್ನಾಗಿ ಮಾಡಿಕೊಂಡರು. ಊರಿನ ಅಮ್ಮ ಆಗಿ ಮಾಡಿಕೊಂಡರು. ಅವಳು ಎಲ್ಲ ಮನೆಗಳ ಅಮ್ಮಂದಿರ ಅಮ್ಮ, ದೊಡ್ಡಮ್ಮ, ಮಹಾತಾಯಿ ಆದಳು. ಅವಳಿಗೆ ಊರಿನ ನಡು ಮಧ್ಯೆ ಒಂದು ಗುಡಿ ಆಯಿತು. ಪ್ರತಿ ಹಬ್ಬದಲ್ಲಿ ಅವಳಿಗೆ ಪೂಜೆ. ಊರಿನ ಮಕ್ಕಳಿಗೆ ಕಾಯಿಲೆಯಾದರೆ, ಊರಿಗೆ ಕೇಡಾದರೆ ಅವಳಿಗೆ ಹರಕೆ ಹೋಯಿತು. ಊರ ಮಧ್ಯೆಯೇ ಇದ್ದುಕೊಂಡು ಊರಿನ ಕಷ್ಟ ನಷ್ಟಗಳಿಗೆ ಆಕೆ ಭಾಗಿಯಾದಳು. ಊರಿನ ಜನಮನದಲ್ಲಿ ಬೇರೂರಿ ಬೆಳೆದಳು. ಅವಳೇ ಊರಿನ ಮೊದಲ ದೇವತೆಯಾದಳು. ಇವಳೇ ಊರಮ್ಮ.

ಊರಮ್ಮನಿಗೆ ಮೊದಲು ಒಂದು ಹೆಸರು ಅಂತ ಇರಲಿಲ್ಲ. ಊರಿನ ತಾಯಿ ಊರಮ್ಮ ಎಂದಷ್ಟೇ ಇತ್ತು. ಯಾವಾಗ ಮನುಷ್ಯನಲ್ಲಿ ನಾನು ಎಂಬ ಭಾವನೆ ಬೆಳೆಯಿತೋ ಆಗ ನನ್ನದೇ ಆದ ಹೆಸರೊಂದು ಬೇಕು ಎಂದು ಅವನು ಯೋಚಿಸಿದ. ತನಗೆ ಸರಿಕಂಡ ಹೆಸರನ್ನು ಇಟ್ಟುಕೊಂಡ. ಜನರಿಗೆಲ್ಲ ಹೆಸರು ಬಂದ ಮೇಲೆ ದೇವರನ್ನು

ಹಾಗೆಯೇ ಬಿಡುತ್ತಾರೆಯೇ? ತಮ್ಮ ಊರಮ್ಮನಿಗೂ ಒಂದು ಹೆಸರು ಹುಡುಕಿದರು. ಈ ರೀತಿ ಪ್ರತಿ ಊರಿನವರೂ ತಮ್ಮ ಊರಮ್ಮನಿಗೆ ತಮಗೆ ಇಷ್ಟವಾದ ಒಂದೊಂದು ಹೆಸರಿಟ್ಟರು. ಹಲವೊಮ್ಮೆ ಅದು ಆ ಊರಿನ ಹೆಸರೇ ಆಗಿರುತ್ತಿತ್ತು. ಉದಾಹರಣೆಗೆ: ಕಾಳೇನಹಳ್ಳಿ ಅಮ್ಮ ಕಾಳಮ್ಮ: ತಿಮ್ಮನಹಳ್ಳಿ ಅಮ್ಮ ತಿಮ್ಮಮ್ಮ; ಮರಗೂರಿನವಳು ಮರಗೂರಮ್ಮ; ಹಾಸನದವಳು ಹಾಸನಾಂಬೆಯಾದರೆ; ಬಿದರೆಯವಳು ಬಿದರೆ ಅಮ್ಮ.

ಹೊರಗಿನ ಹೆಸರುಗಳು ಆಮೇಲೆ ಹುಟ್ಟಿಕೊಂಡುವು. ಪ್ಲೇಗು ಬಂತು. ಪ್ಲೇಗಿನಮ್ಮ ಹುಟ್ಟಿಕೊಂಡಳು; ಕಾಲರಾ ಬಂತು ಅದಕ್ಕೊಬ್ಬ ಅಮ್ಮ ಹುಟ್ಟಿದಳು. ಈ ರೋಗಗಳನ್ನು ದೊಡ್ಡ ರೋಗಗಳೆಂದು ಕರೆಯುತ್ತಿದ್ದರು. ಇದನ್ನು ಹೋಗಲಾಡಿಸಲು 'ದೊಡ್ಡಮ್ಮ'ನನ್ನು ಹುಡುಕಿಕೊಂಡರು. ದೊಡ್ಡರೋಗವನ್ನು ಒದ್ದೋಡಿಸಲು ಸಣ್ಣ ಅಮ್ಮನ ಕೈಯಲ್ಲಿ ಆದೀತೇ!

ಮೊದಲು ಮನುಷ್ಯನಿಗೆ ನೆಲ, ಜನ, ಮರಗಿಡದ ಹೆಸರುಗಳು ಬಂದವು. ನಂತರ ಹೊರಗಿನ ಶಕ್ತಿಗಳ ಹೆಸರುಗಳು. ಅದರಲ್ಲಿ ಎರಡು ವಿಧ. ಒಂದು, ಒಳ್ಳೆಯ ಶಕ್ತಿಯ ಹೆಸರುಗಳು, ಉದಾ: ನೆಲ, ಜಲ, ಆಕಾಶ, ಗಾಳಿ. ಎರಡು, ದುಷ್ಟಶಕ್ತಿಯ ಹೆಸರುಗಳು, ಉದಾ: ಮಾರಿ, ಮಸಣಿ, ಕಾಳಿ, ದುರ್ಗಿ, ಚಂಡಿ ಇತ್ಯಾದಿ; ಜನ ಹೆದರಿದ್ದೇ ದುಷ್ಟಶಕ್ತಿಗಳಿಗೆ. ಅನ್ನ-ನೀರು-ಗಾಳಿ ಇವೆಲ್ಲ ಮನುಷ್ಯನಿಗೆ ಜೀವ-ಜೀವನವನ್ನು ಕೊಡುತ್ತವೆ, ಅವನನ್ನು ಕಾಯುತ್ತವೆ. ಕೆಟ್ಟಶಕ್ತಿಗಳಾದ ಪೀಡೆ-ಪಿಡುಗುಗಳು ಅವನನ್ನು ಕಾಡುತ್ತವೆ. ಅವನ ಜೀವನವನ್ನು ಹಾಳು ಮಾಡುತ್ತವೆ. ಆದ್ದರಿಂದ ಈ ಶಕ್ತಿಗಳನ್ನು ಸಮಾಧಾನಪಡಿಸಲು ಮನುಷ್ಯ ಹೊರಟ. ಆಗ ದೇವರು-ದೇವತೆ ಆಚರಣೆಗೆ ಬಂದವು. ಗುಡಿಗಳನ್ನು ಕಟ್ಟಲಾಯಿತು. ಪೂಜೆ ಪುನಸ್ಕಾರಗಳು ಉಂಟಾದವು. ಮಾರಮ್ಮ ಬಂದುದು ಇದೇ ದಾರಿಯಲ್ಲಿ.

ಮಾರಮ್ಮನ ಆಗಮನ

ಊರಿಂದ ಬಂದವಳು ಊರಮ್ಮನಾದರೆ ಹೊರಗಿನಿಂದ ಬಂದವಳು ಮಾರಮ್ಮ. ಊರಮ್ಮನನ್ನು ಓಡಿಸಿ ಮಾರಮ್ಮ ಬಂದಳು. ಅವಳು ಬಂದ ಕತೆ ಹೀಗಿದೆ:

ಒಂದೂರಲ್ಲಿ ಒಬ್ಬ ಬ್ರಾಹ್ಮಣ ಇದ್ದ. ಅವನಿಗೆ ಒಬ್ಬಳೇ ಮಗಳು. ಅವಳಿಗೆ ಬಹಳ ವರ್ಷ ಮದುವೆ ಆಗಿರಲಿಲ್ಲ. ತಂದೆಗೆ ಗಂಡು ಹುಡುಕಿ ಸಾಕಾಗಿತ್ತು. ಅವನ ಕಣ್ಣುಗಳಿಗೆ ಮಬ್ಬು ಕವಿದಿತ್ತು. ಆ ಬ್ರಾಹ್ಮಣನ ಮನೆಯಲ್ಲಿ ಒಬ್ಬ ಮಾದಿಗ ಜೀತಕ್ಕಿದ್ದ. ಅವನೂ ಪ್ರಾಯಕ್ಕೆ ಬಂದಿದ್ದ. ತನ್ನ ಯಜಮಾನನ ಮಗಳನ್ನು ಮದುವೆಯಾಗಲು ಯಾರೂ ಬರದಿದ್ದು ಕಂಡು ಅವನಿಗೆ ಬೇಸರವಾಗಿತ್ತು. ಯಜಮಾನನ ಸಂಕಟ ಕಂಡು ಕರುಳು ಚುರಕ್ ಅಂದಿತು. ಏನಾದರೂ ಮಾಡಿ ಯಜಮಾನನ ಸಂಕಟ ಪರಿಹಾರ ಮಾಡಬೇಕೆಂದು ಅವನು ಯೋಚಿಸಿದ್ದ. ತಾನೇ ಆಕೆಯನ್ನು ಮದುವೆಯಾಗಬಹುದಿತ್ತು. ಆದರೆ ಜನ ಸುಮ್ಮನೆ ಬಿಟ್ಟಾರೆಯೇ, ಅವನು ಹೆದರಿದ.

ಆದರೂ ಅವನ ಮನಸ್ಸು ಸುಮ್ಮನಿರಲಿಲ್ಲ. ಏನಾದರೂ ಒಂದು ಉಪಾಯ ಮಾಡಬೇಕೆನಿಸಿತು. ಬಹಳ ಕಾಲ ಬ್ರಾಹ್ಮಣನ ಮನೆಯಲ್ಲೇ ಇದ್ದುದರಿಂದ ನಾಲ್ಕು ಶ್ಲೋಕ ಕಲಿತಿದ್ದ. ಇದೇ ಸಾಕು ಎಂದು ತೀರ್ಮಾನಿಸಿದ. ಅವನು ಬ್ರಾಹ್ಮಣ ಯುವಕನ ವೇಷ ಹಾಕಿಕೊಂಡ. ತಾನಿದ್ದ ಮನೆಗೆ ಹೊಸ ವರನಂತೆ ಬಂದ. ಬಡ ಬ್ರಾಹ್ಮಣನಿಗೆ ಸಂತೋಷವೇ ಆಯಿತು. ಏನೂ ಸಂಪತ್ತು ಇಲ್ಲದ್ದಿದರೂ ಪರವಾಗಿಲ್ಲ, ಗಂಡಿಗೆ ನಾಲ್ಕಕ್ಷರ ಬಂದರೆ ಸಾಕು, ಎಂದ. ಅವನಿಗೆ ಅಷ್ಟು ಸಾಕಾಗಿತ್ತು. ಅದೇ ಬ್ರಾಹ್ಮಣನ ಮನೆಯಲ್ಲಿ ಇದ್ದು ನಾಲ್ಕಕ್ಷರ ಹಾಗೂ ನಾಲ್ಕು ಶ್ಲೋಕಗಳನ್ನು ಕಲಿತಿದ್ದ. ಈ ಕಲಿಕೆಯೇ ಅವನಿಗೆ ಧೈರ್ಯ ತಂದುಕೊಟ್ಟಿತ್ತು. ಎಷ್ಟೇ ಆದರೂ ವಿದ್ಯೆ ವಿದ್ಯೆಯೇ ಅಲ್ಲವೇ? ಅದಕ್ಕೆ ಸರಿಸಮಾನ ಉಂಟೇ? ಅಕ್ಷರ ಕಲಿತವನು ಯಕ್ಷರಿಗಿಂತ ಮಿಗಿಲಂತೆ. ವಿದ್ಯೆ ಕಲಿತವರು ಎಲ್ಲೆಲ್ಲಿ ಬೇಕಾದರೂ ಹಾರಾಡಬಹುದಂತೆ!

ಸರಿ, ಈ ಹೊಸ ಯುವಕ ಬ್ರಾಹ್ಮಣ ಪಂಡಿತನ ಮುಂದೆ ಬಂದ. ನಾಲ್ಕಕ್ಷರ ಹೇಳಿದ, ಶ್ಲೋಕಗಳನ್ನೂ ಹೇಳಿದ. ಆ ಕಾಲದಲ್ಲಿ ವಿದ್ಯೆ ಕಲಿತವನೇ ಬ್ರಾಹ್ಮಣ ಅನ್ನಿಸಿಕೊಂಡಿದ್ದ. ಈತ ನಾಲ್ಕಕ್ಷರ ಹೇಳಿದ ಮೇಲೆ ಆ ಪಂಡಿತ ಇವನು ನಮ್ಮವನೇ ಎಂದುಕೊಂಡ. ಮಗಳನ್ನು ಕೊಟ್ಟು ಮದುವೆ ಮಾಡಿದ. 'ನಾಲ್ಕಕ್ಷರ ಕಲಿತಿದ್ದೀಯೆ ಎಲ್ಲಿ ಹೋದರೂ ಕಾಲ ಹಾಕಬಹುದು. ಹೋಗು, ಎಲ್ಲಿಯಾದರೂ ಸುಖವಾಗಿರು' ಎಂದು ಹೇಳಿದ. ಇಬ್ಬರೂ ಅಕ್ಷರ ಕಲಿತವರು. ನಮ್ಮ ದೇಶದಲ್ಲಿ ಅಕ್ಷರಸ್ಥರು ಕಡಿಮೆ. ಆದ್ದರಿಂದ ಎಲ್ಲಿಯಾದರೂ ಪಾಠ ಹೇಳಿಕೊಂಡಾದರೂ ಕಾಲ ಹಾಕಬಹುದು ಎಂದು ಆ ಬ್ರಾಹ್ಮಣ ಪಂಡಿತ ಭಾವಿಸಿದ.

ಈ ಯುವಕನಿಗೆ ನಾನು ಅಕ್ಷರ ಕಲಿತವನೆಂದು ಬ್ರಾಹ್ಮಣನಿಗೆ ಮೋಸ ಮಾಡಿದ ಬಗ್ಗೆ ಆತಂಕವಿತ್ತು. ಎಲ್ಲಾದರೂ ಅಕ್ಷರ ಕಲಿಯೋಣವೆಂದರೆ ಕೆಳ ಜಾತಿಯವನಿಗೆ ಯಾರು ಹೇಳಿಕೊಡುತ್ತಾರೆ ಎಂಬ ಭಯವೂ ಇತ್ತು. ಅದು ನಿಜವೇ ಆಗಿತ್ತು. ಅವನಿಗೆ ಅಕ್ಷರ ಹೇಳಿಕೊಡುವವರು ಯಾರೂ ಮುಂದೆ ಬರಲಿಲ್ಲ. ಆದ್ದರಿಂದ ಅವನು ತನ್ನ ಹಳೆಯ ಕಸುಬನ್ನೇ ಮುಂದುವರಿಸಿದ. ದಿನಾ ಚಪ್ಪಲಿ ಹೊಲೆಯುತ್ತಿದ್ದ. ಹೆಂಡತಿಗೆ ಇದು ಗೊತ್ತೇ ಇರಲಿಲ್ಲ. ದೂರದಲ್ಲಿ ಎಲ್ಲೋ ಕುಳಿತು ಹಳೆ ಚಪ್ಪಲಿ ಹೊಲೆದು ಹಣ ಸಂಪಾದಿಸಿಕೊಂಡು ಬರುತ್ತಿದ್ದ. ಎಷ್ಟೋ ದಿನ ಅವನ ಮಕ್ಕಳು ಕೇಳಿದ್ದವು, 'ಅಪ್ಪಾ, ನೀನು ಮಾಡುವ ಕೆಲಸವನ್ನು ನಾವು ನೋಡಬೇಕು' ಅಂತ. 'ಬ್ಯಾಡಿರೊ ಬ್ಯಾಡಿರೊ ಅದು ಕಷ್ಟದ ಕೆಲಸ, ಜಾಗವೂ ದೂರ ಸುಮ್ಮನಿರಿ' ಎಂದು ಸಂತೈಸಿದ.

ಈ ಮಧ್ಯೆ ಒಂದು ಹಗರಣ ನಡೆದುಹೋಯಿತು. ಚಮ್ಮಾರನ ತಾಯಿ ಮಗನ ಸಂಸಾರದ ಜೊತೆಗೇ ವಾಸವಾಗಿದ್ದಳು. ಸೊಸೆಗೆ ಸಹಾಯ ಮಾಡಿಕೊಡುತ್ತ ಮಕ್ಕಳನ್ನು ಚೆನ್ನಾಗಿ ನೋಡಿಕೊಳ್ಳುತ್ತಿದ್ದಳು. ಒಂದು ದಿನ ಸೊಸೆ ತೆಳುವಾದ ದೋಸೆ ಹೊಯ್ದಳು. ಚಮ್ಮಾರನ ತಾಯಿ ಆ ದೋಸೆ ತಿಂದು ಸಂತೋಷಪಟ್ಟಳು. 'ಏನು ತಿಂದರೂ ಕೋಣನ ನಾಲಿಗೆ ತಿಂದ ಹಾಗೆ ಆಗಲಿಲ್ಲವಲ್ಲ' ಎಂದು ಆಡಿಯೂ ಬಿಟ್ಟಳು. ಈ ಮಾತು ಕೇಳಿ ಸೊಸೆಗೆ ಅನುಮಾನ ಬಂತು.

ಈ ಅನುಮಾನವೂ, ಮಕ್ಕಳು ಅಪ್ಪನ ಕಸುಬನ್ನು ನೋಡಬೇಕೆಂದು ಬಯಸಿದ್ದೂ ಒಟ್ಟುಗೂಡಿದವು. ಅಪ್ಪ ಮಾಡುವುದನ್ನು ನೋಡಿ ಮಕ್ಕಳು ತಾವೂ ಅದೇ ರೀತಿ ಎಲೆ ಸೇರಿಸಿ ಹೊಲೆಯುತ್ತಿದ್ದವು. ಅಂತೂ ಹೆಂಡತಿಗೆ ಗಂಡನ ಕಸುಬು ಏನೆಂದು ತಿಳಿಯಿತು. ಅವಳು ಕೆಂಡಾಮಂಡಲವಾದಳು. ಸಿಟ್ಟು ತಡೆಯದೆ ರಾತ್ರಿ ಗಂಡ, ಅತ್ತೆ ಮತ್ತು ಮಕ್ಕಳು ಮಲಗಿದ್ದ ಸಮಯದಲ್ಲಿ ಮನೆಗೆ ಬೆಂಕಿ ಹಚ್ಚಿದಳು. ತಪ್ಪಿಸಿಕೊಳ್ಳಲು ಯತ್ನಿಸಿದ ಗಂಡನನ್ನು ಸಿಗಿದು ಹಾಕಿದಳು. ನಾನು ಮುಂದಿನ ಜನ್ಮದಲ್ಲಿ ಮಾರಿಯಾಗಿ ಹುಟ್ಟುತ್ತೇನೆ. ನೀನು ಕೋಣನಾಗಿ ಹುಟ್ಟಿ ನನಗೆ ಬಲಿಯಾಗು ಎಂದು ಶಾಪಕೊಟ್ಟು ಹೊರಟು ಹೋದಳು. ಮುಂದೆ ಎಲ್ಲವೂ ಅವಳ ಶಾಪದಂತೆಯೇ ನಡೆಯಿತು. ಮಾರಿ, ದೇವತೆಯಾಗಿ ಅಂದರೆ ಮಾರಮ್ಮನಾಗಿ ಬಂದ ಬಗ್ಗೆ ಇರುವ ಜನಪದ ಕತೆ ಇದು.

ಈ ಕತೆಯಂತೆ ಊರಮ್ಮ ಚಮ್ಮಾರನ ತಾಯಿ. ಆಕೆಯನ್ನು ಮಾರಿ ಮುಗಿಸಿದಳು. ಅವಳ ಜಾಗದಲ್ಲಿ ತಾನು ನೆಲೆಯೂರಿದಳು. ಮಾರಿಯ ಬಯಕೆಯಂತೆ ವರ್ಷಕ್ಕೊಮ್ಮೆ ಜಾತ್ರೆ ನಡೆಯಬೇಕು. ಅಲ್ಲಿ ಒಂದು ಕೋಣವನ್ನು ಬಲಿಕೊಡಬೇಕು. ಇಲ್ಲದಿದ್ದರೆ ಊರಿಗೆ ಕೇಡು ತಪ್ಪಿದ್ದಲ್ಲ. ಮಾರಮ್ಮ ಬಂದ ಬಗ್ಗೆ ಇದು ಮುಖ್ಯ ಕತೆ. ಇದೇ ರೀತಿ ಇನ್ನೂ ಬೇರೆ ಬೇರೆ ಕತೆಗಳಿವೆ. ಇವುಗಳಲ್ಲಿ ಅಂಥ ವ್ಯತ್ಯಾಸಗಳೇನೂ ಇಲ್ಲ. ಮಾರಿಯಾದವಳು ಬ್ರಾಹ್ಮಣನ ಮಗಳು ಎನ್ನುವ ಅಂಶ ಸ್ಥಿರವಾದುದು. ಅವಳು ಹೇಗೆ ಬಂದಳು, ಹೇಗೆ ಮಾರಿಯಾದಳು ಎನ್ನುವ ವಿಷಯದಲ್ಲಿ ಮಾತ್ರ ವ್ಯತ್ಯಾಸವಿದೆ.

ಮಾರಮ್ಮನನ್ನು ಕುರಿತ ಈ ಕತೆ ನಮ್ಮಲ್ಲಿ ಕೆಲವು ಅನುಮಾನಗಳನ್ನು ಹುಟ್ಟಿಸುತ್ತದೆ. ಅದು ನಿಜವಾಗಿ ನಡೆದ ಕತೆಯೇ ಅಥವಾ ಯಾರಾದರೂ ಕಟ್ಟಿದ್ದೇ? ನಮ್ಮಲ್ಲಿ ವರ್ಣ-ಜಾತಿ ಪದ್ಧತಿಗಳು ಮೊದಲಿನಿಂದಲೂ ಇದ್ದವು. ಮೇಲು ವರ್ಣದವರು ಬಿಳಿ ಬಣ್ಣದವರು, ಕೆಳ ವರ್ಣದವರು ಕಪ್ಪು ಜನರೂ ಆಗಿದ್ದರು. ಇವರ ನಡುವೆ ಮದುವೆಯ ಸಂಬಂಧ ಇರುತ್ತಿರಲಿಲ್ಲ. ಯಾರೋ ಇಬ್ಬರು, ಪ್ರೀತಿಸಿದ ಕೆಳ ವರ್ಗದ ಹುಡುಗ ಮತ್ತು ಮೇಲು ವರ್ಗದ ಹುಡುಗಿ ಮದುವೆಯಾಗಿರಬೇಕು. ಇದನ್ನು ಸಹಿಸದ ಸಂಪ್ರದಾಯವಾದಿಗಳು ಅವರಿಬ್ಬರನ್ನು ಮುಗಿಸಿ ಕತೆ ಕಟ್ಟಿರಬೇಕು. ಇನ್ನು ಮುಂದೆ ಕೆಳ ವರ್ಗದವರು ಮೇಲು ವರ್ಗದ ಸಂಬಂಧ ಮಾಡಬಾರದು ಎಂದು ಹೆದರಿಸಲು ಈ ಕತೆ ಕಟ್ಟಿದಂತೆ ಕಾಣುತ್ತದೆ. ಅದಕ್ಕೆ ಗಂಡಿಗೆ ಮತ್ತು ಗಂಡಿನ ಮನೆಯವರಿಗೆ ಭಯಂಕರ ಶಿಕ್ಷೆಯನ್ನು ಕೊಟ್ಟಿದ್ದಾರೆ.

ಮಾರಮ್ಮನ ಅವತಾರಗಳು

ಎಷ್ಟು ಊರುಗಳಿವೆಯೋ ಅಷ್ಟು ಮಾರಿಗಳಿವೆ. ಊರು ಕಟ್ಟಿದ ಮೇಲೆ ಮಾರಿ ಬಂದು ಸೇರಿದಳು. ಇವಳು ಹೊರಗಿನ ಶಕ್ತಿ. ದೇವತೆಗಳಲ್ಲಿ ಮೊದಲು ವಲಸೆ

ಬಂದ ದೇವತೆ ಇವಳೇ ಎಂದು ತೋರುತ್ತದೆ. ಆಕೆ ಕಾಯಿಲೆ ಕಸಾಲೆ ತರುವ ದೇವತೆ, ಜನರನ್ನು ಹೆದರಿಸುವವಳು. ಕೆಟ್ಟದ್ದಕ್ಕೆಲ್ಲಾ ಮಾರಿ ಎಂದೇ ಕರೆಯುವುದು ರೂಢಿಯಾಗಿದೆ. 'ದಾರೀಲಿ ಹೋಗೋ ಮಾರೀನ ಊರಿಗೆ ಕರೆದಂತೆ' ಎಂದು ಹೆದರೋದರ ಅರ್ಥ ಇದೇ. ಮಾರಿ ದೇವತೆ, ನಾಡ ಮಾರಿ, ಗಡಿಮಾರಿ, ಬಿಸಿಲ ಮಾರಿ, ಸೀಮೆಮಾರಿ, ಗಾಳಿಮಾರಿ, ಕುಕ್ಕೆಮಾರಿ, ಬರಗಿ ಮಾರಿ, ತಂಟಲಮಾರಿ, ದಂಡಿನಮಾರಿ ಮತ್ತು ಹೊರಗ ಲಮ್ಮ ಎಂಬ ಅನೇಕ ಹೆಸರುಗಳನ್ನು ಹೊಂದಿದ್ದಾಳೆ.

ಮಾರಮ್ಮ ಹೊರಗಿನ ದೇವತೆ ಎನ್ನುವುದಕ್ಕೆ ಅವಳು ಬ್ರಾಹ್ಮಣ ದೇವತೆ ಮತ್ತು ಸಸ್ಯಾಹಾರಿ ಎಂಬುದು ಮತ್ತೊಂದು ಕಾರಣ. ಪ್ರಾಣಿ ಬಲಿ ಕೊಡುವುದು ಅವಳಿಗೆ ಅಲ್ಲ, ಅವಳ ಭೂತಗಳಿಗೆ ಎಂದೂ ಹೇಳುತ್ತಾರೆ. ಮಾರಮ್ಮ ಕೇರಿಯ ಒಳಗಡೆ ಬರದೆ ಉಳಿದುಕೊಂಡದ್ದೂ ಕೂಡ, ಕೇರಿ ಅವಳಿಗೆ ಮೈಲಿಗೆ; ಕೇರಿಗೆ ಅವಳು ಕೇರಿ ಮೈಲಿಗೆ ಅನ್ನುವ ಕಾರಣಕ್ಕಾಗಿ. ಈಗಲೂ ಕೆಳಜಾತಿಯವರು ಮೇಲುಜಾತಿಯ ಕೇರಿಗಳಿಗೆ, ಮೇಲುಜಾತಿಯವರು ಕೆಳಜಾತಿಯವರ ಕೇರಿಗಳಿಗೆ ಹೋಗಬಾರದೆನ್ನುವ ಕಟ್ಟಳೆಯಿದೆ. ಆ ವಿಷಯ ಮಾರಮ್ಮ ನೆಲೆಸಿರುವ ಜಾಗದಿಂದ ಗೊತ್ತಾಗುತ್ತದೆ. ಇವಳನ್ನು ಮೇಲು ಜಾತಿಯವರು ಪೂಜಿಸುವುದಿಲ್ಲ; ಕೆಳ ಜಾತಿಯವರು ಹೆಚ್ಚು ಭಕ್ತಿಯಿಂದ ಪೂಜಿಸುತ್ತಾರೆ. ಇದರಿಂದ ಇವಳು ಮೇಲು ಜಾತಿಯಿಂದ ಹೊರ ಹಾಕಲ್ಪಟ್ಟವಳು. ಕೆಳಜಾತಿಯವರು ಹೆದರಿಕೆಯಿಂದ ಇವಳನ್ನು ಪೂಜಿಸುವಂತಿದೆ. ಆದ್ದರಿಂದಲೇ ಅವಳನ್ನು ಆದಷ್ಟು ಗಡಿದಾಟಿಸಬೇಕೆಂದು ಜನ ಆತುರ ಪಡುತ್ತಾರೆ. ಮಾರಿಯನ್ನು ಓಡಿಸುವುದು, ಬಿಡಿಸುವುದು ಈ ಆಚರಣೆಗಳಿಂದ ಅವಳು ಕಾಯುವ ದೇವತೆಯಲ್ಲ; ಕಾಡುವ ದೇವತೆ ಎಂದು ತಿಳಿದುಬರುತ್ತದೆ.

ಇದೇ ಮಾರಿ ದೇವತೆ, ಕೆಲವು ಕಡೆ ಸಂಸ್ಕೃತೀಕರಣಕ್ಕೆ ಒಳಗಾಗಿದ್ದಾಳೆ. ಮಾರಮ್ಮ-ಮಹೇಶ್ವರಿ; ಚೌಡಮ್ಮ-ಚೌಡೇಶ್ವರಿ; ಚಂಡಿ-ಚಾಮುಂಡೇಶ್ವರಿ; ಲಕ್ಕಮ್ಮ-ರಕ್ತೇಶ್ವರಿ; ಮೂಕಮ್ಮ-ಮೂಕಾಂಬಿಕೆ ಇವು ತಮ್ಮ ತಮ್ಮ ಮೂಲ ನೆಲೆಯನ್ನು ಕಳೆದುಕೊಂಡಿವೆ. ಕೆಲವು ಮಾರಮ್ಮಗಳಿಗೆ ಮಾತ್ರ ಈ ಅವಕಾಶ ಸಿಕ್ಕಿದೆ. ವಿಶೇಷ ಪದವಿಯಿಂದಾಗಿ ಮೇಲು ವರ್ಗಕ್ಕೆ ಹೋಗಿವೆ. ಇವು ನಡೆ-ನುಡಿ, ಆಚರಣೆಗಳಲ್ಲೆಲ್ಲ

ತಮ್ಮ ಮಾರಿತನವನ್ನು ಕಳೆದುಕೊಂಡಿವೆ. ಈ ದೇವತೆಗಳಿಗೆ ಸಿಕ್ಕಿದ ವಿಶೇಷ ಪ್ರಚಾರ ಮತ್ತು ಲಾಭ ಇದಕ್ಕೆ ಕಾರಣ ಎನ್ನಬಹುದು.

ಇಷ್ಟೇ ಅಲ್ಲದೆ ಮಾರಮ್ಮನನ್ನು ಅವಳ ಸೇವಾ ವಿಧಾನದಿಂದಲೂ ಅವಳೊಬ್ಬ ವೈದಿಕದೇವತೆ ಎಂದು ಅರ್ಥ ಮಾಡಿಕೊಳ್ಳಬಹುದು. ಭಕ್ತಿಯ ಬಯ್ಗುಳ ಹಾಕುವುದು, ಹರಿದ ಚಪ್ಪಲಿ ಎಸೆಯುವುದು, ಹಳೆ ಪೊರಕೆ ಪೂಜೆ ಮಾಡುವುದು ಮುಂತಾದುವೆಲ್ಲ ಅವಳನ್ನು ದೂರ ಹಾಕುವ ಆಚರಣೆಗಳೇ ಆಗಿವೆ. ಅವಳಿದ್ದ ಜಾಗವನ್ನು ಸುಟ್ಟು 'ಶುದ್ಧಿ' ಮಾಡುತ್ತಾರೆ. ಅವಳ ಪ್ರತಿಮೆಯನ್ನು ಅರ್ಧ ಸುಟ್ಟು ಹೊರಕ್ಕೆಸೆಯುತ್ತಾರೆ. ಅವಳ ಅಂಗಾಂಗಗಳನ್ನು ಬೇರೆ ಬೇರೆ ಮಾಡಿ ಸಮುದ್ರಕ್ಕೆ ಎಸೆಯುತ್ತಾರೆ- ಇವೆಲ್ಲವೂ ಕೂಡ ಅವಳು ಮತ್ತೆ ಈ ಕಡೆಗೆ ಬರದಿರಲಿ ಎನ್ನುವುದೇ ಆಗಿದೆ.

ಮಾರಮ್ಮನ ರೂಪ

ಮಾರಮ್ಮನ ಮುಖ ಅತ್ಯಂತ ಭಯಂಕರ. ಕೋರೆ ಹಲ್ಲುಗಳು, ಕೆಂಡದಂಥ ಕಣ್ಣುಗಳು, ಹೊರ ಚಾಚಿದ ನಾಲಿಗೆ- ಇದು ಸಾಮಾನ್ಯವಾಗಿ ಮಾರಿಯ ರೂಪ. ಒರಟು ಕಲ್ಲಿಗೇ ಈ ರೂಪ ಕೊಟ್ಟು, ಎಣ್ಣೆಯಿಂದ ಕೂಡಿದ ಜಿಗುಟು ಕಲ್ಲಿಗೆ ಹಿತ್ತಾಳೆಯ ಅಥವಾ ಬೆಳ್ಳಿಯ ಕಣ್ಣುಗಳನ್ನು ಅಂಟಿಸುತ್ತಾರೆ. ಇನ್ನು ಕೆಲವು ಕಡೆ ಮರದಲ್ಲಿ ಅಥವಾ ಮಣ್ಣಿನಲ್ಲಿ ಮಾರಮ್ಮನ ಮುಖವನ್ನು ತಿದ್ದುತ್ತಾರೆ.

ಅಲಂಕಾರ

ಮಾರಿಯ ಅಲಂಕಾರಕ್ಕೆ ಹೇರಳವಾಗಿ ಅರಿಸಿನ-ಕುಂಕುಮ ಬಳಸುತ್ತಾರೆ. ಚೆಂಡು ಹೂ, ಕಣಗಲ ಹೂ ಅಥವಾ ಸೇವಂತಿಗೆ ಹೂಗಳಲ್ಲಿ ಯಾವುದಾದರೂ ಒಂದನ್ನು ಬಳಸುತ್ತಾರೆ. ಬೇವಿನ ಸೊಪ್ಪನ್ನೂ ಮಾರಿಯನ್ನು ಅಲಂಕರಿಸಲು ಉಪಯೋಗಿಸುತ್ತಾರೆ. ಕೆಲವೊಮ್ಮೆ ಹೊಂಬಾಳೆಯನ್ನು ಅಕ್ಕಪಕ್ಕದಲ್ಲಿಡುತ್ತಾರೆ.



ಮಾರಮ್ಮನ ರೂಪ

ನೆಲೆ

ಮಾರಮ್ಮನ ಗುಡಿ ಊರ ಹೊರಗೆ ಇರುತ್ತದೆ. ಇವಳ ಗುಡಿ ಆಡಂಬರವಾಗಿ, ಕಲಾತ್ಮಕವಾಗಿ ಇರುವುದಿಲ್ಲ. ಸಾಮಾನ್ಯವಾಗಿ ಮಾರಿಗುಡಿ ಅಂದರೆ ಕಲ್ಲು ಚಪ್ಪಡಿ ಜೋಡಿಸಿ, ಒರಟಾದ ಮಣ್ಣು ಮೆತ್ತಿರುತ್ತಾರೆ. ಸುಣ್ಣ-ಕೆಮ್ಮಣ್ಣು ಪಟ್ಟೆ ಬಳಿದು ಸಾರಿಸಿರುತ್ತಾರೆ. ಕೆಲವೊಮ್ಮೆ ಊರ ಮಧ್ಯದಲ್ಲೂ ಮಾರಿಗುಡಿ ಇರುವುದುಂಟು.

ಆಚರಣೆ

ಮಾರಿಹಬ್ಬ ಸಾಮಾನ್ಯವಾಗಿ ಬಯಲುನಾಡಿನ ಕಡೆಗಳಲ್ಲಿ ಬೇಸಿಗೆಯಲ್ಲಿ ಅಂದರೆ ಯುಗಾದಿಗೆ ಮುನ್ನ ನಡೆಯುತ್ತದೆ. ಉತ್ತರಕನ್ನಡದ ಕೆಲವು ಜಿಲ್ಲೆಗಳಲ್ಲಿ ಜೂನ್-ಜುಲೈ ತಿಂಗಳಿನಲ್ಲೂ, ದಕ್ಷಿಣ ಕನ್ನಡದ ಕೆಲವೆಡೆ ನವೆಂಬರ್ ತಿಂಗಳಿನಲ್ಲೂ ನಡೆಯುತ್ತದೆ.

ಊರವರೆಲ್ಲ ಒಂದು ಕಡೆ ಸೇರಿ ಮಾರಿಹಬ್ಬದ ದಿನವನ್ನು ನಿಗದಿಪಡಿಸುತ್ತಾರೆ. ಇದು ಒಂದು ದಿನದಿಂದ ಹಿಡಿದು, ಏಳು ದಿನಗಳ ಜಾತ್ರೆಯವರೆಗೂ ಆಗಬಹುದು. ಸಾಮಾನ್ಯವಾಗಿ ಮಾರಿಹಬ್ಬ ಕೆಲವು ಕಡೆ ಮಂಗಳವಾರ ಆರಂಭವಾದರೆ, ಮತ್ತೆ ಕೆಲವೆಡೆ ಶುಕ್ರವಾರದಂದು ನಡೆಯುತ್ತದೆ.

ಹಬ್ಬದ ಸಂದರ್ಭದಲ್ಲಿ ಮಾರಿಗುಡಿಗೆ ವಿಶೇಷ ಅಲಂಕಾರ. ಗುಡಿಯನ್ನೆಲ್ಲ ದುಂಬು ಧೂಳು ಹೊಡೆದು ಸಾರಿಸುತ್ತಾರೆ. ಸುಣ್ಣ ಕೆಮ್ಮಣ್ಣು ಪಟ್ಟೆ ಬಳಿಯುತ್ತಾರೆ. ಗುಡಿಯ ಮುಂದೆ ತಳಿರು ತೋರಣ ಕಟ್ಟಿ ಚಪ್ಪರ ಹಾಕುತ್ತಾರೆ. ಬಗೆ ಬಗೆಯ ಬಣ್ಣ ಬಣ್ಣದ ಕಾಗದದ ಕುಚ್ಚುಗಳನ್ನು ಕಟ್ಟುತ್ತಾರೆ.

ಮಾರಿಹಬ್ಬವನ್ನು ಮಾಡುವಾಗ ಬಹಳ ನೇಮ-ನಿಷ್ಠೆಯಿಂದ ಮಾಡುತ್ತಾರೆ.

ಎಲ್ಲಿಯಾದರೂ ಸ್ವಲ್ಪ ಲೋಪವಾದರೂ ಮಾರಮ್ಮ ಉರಿದು ಶಪಿಸುತ್ತಾಳೆ ಎಂಬ ಭಯವೇ ಇದಕ್ಕೆ ಕಾರಣ. ಇಲ್ಲಿ ಪೂಜೆ ಮಾಡುವವನು ಹೊಲೆಯ ಅಥವಾ ಮಾದಿಗರ ಜಾತಿಗೆ ಸೇರಿರುತ್ತಾನೆ. ಅಗಸರು, ವಿಶ್ವಕರ್ಮರು, ಗೊಂಡರು— ಹೀಗೆ ಬೇರೆ ಬೇರೆ ಜಾತಿಯವರೂ ಪೂಜೆ ಮಾಡುವುದುಂಟು.

ಆಚರಣೆಯ ಕೆಲವು ವಿಧಾನಗಳು

ಮಾರಿಹಬ್ಬದ ಪ್ರಮುಖ ಅಂಗ ಎಂದರೆ ಅಲ್ಲಿ ಕೊಡುವ ಬಲಿ. ಇದು ಕೋಳಿಯಿಂದ ಹಿಡಿದು ಕೋಣದವರೆಗೂ ಉಂಟು. ಮಾರಿಗೆ ಮೊದಲು ತಂಪು ಕೊಟ್ಟು, ನಂತರ ಬಲಿಕೊಡುತ್ತಾರೆ. ತಂಬಿಟ್ಟು, ಎಳನೀರು, ಮೊಸರನ್ನ ಇವು ಸಿಹಿ ತಳಿಗೆಯಾದರೆ, ಕೋಳಿ ಅಥವಾ ಕುರಿಯನ್ನು ಕಡಿಯುವುದು ಮತ್ತೊಂದು ವಿಧ. ಕೋಣ ಬಲಿ ಸಂಪ್ರದಾಯ ಬಹಳ ಹಿಂದಿನಿಂದಲೂ ಇದೆಯಾದರೂ ಈಗ ಎಲ್ಲೋ ಕೆಲವೆಡೆ ಮಾತ್ರ ಉಳಿದು ಬಂದಿದೆ. ಬಲಿಗರುವನ್ನು ಪೂಜೆ ಮಾಡಿ, ಊರಲ್ಲೆಲ್ಲ ಮೆರವಣಿಗೆ ಮಾಡಿ ವಾದ್ಯದ ಸಮೇತ ಬಲಿಗಂಬಕ್ಕೆ ತರುತ್ತಾರೆ. ಬಲಿಷ್ಠನಾದ ವ್ಯಕ್ತಿ ಅದನ್ನು ಕಡಿಯುತ್ತಾನೆ. ಮಾರಿಗೂ-ಕೋಣಕ್ಕೂ ಹಿನ್ನೆಲೆಯ ಕಥೆಯಿರುವುದರಿಂದ ಕೋಣವನ್ನು ಕಡಿಯುವ ಕಡೆಗಳಲ್ಲಿ ಹಬ್ಬ ಬಹಳ ಸಡಗರದಿಂದ ಜರುಗುತ್ತದೆ. ಬಲಿಯ ಪ್ರಾಣಿಯ ರಕ್ತವನ್ನು ಮೀಸಲು ಅನ್ನದೊಂದಿಗೆ ಬೆರೆಸುತ್ತಾರೆ. ಅದೇ 'ಚರು'. ಚರುವನ್ನು ಊರಿನ ಸುತ್ತ ಚೆಲ್ಲುತ್ತಾರೆ. ಹೀಗೆ ಮಾಡುವುದರಿಂದ 'ಪೀಡ್ಗಳೆ'ಯಿತು ಎಂಬ ನಂಬಿಕೆಯಿದೆ.


ಹರಕೆ ಹೊರುವುದು

ದೇವತೆಯ ಬಗೆಗಿನ ಭಯವೇ ಭಕ್ತ ಹರಕೆ ಹೊರುವಂತೆ ಮಾಡುತ್ತದೆ. ಭಕ್ತಿಯು ಭಯ ಅಥವಾ ಬೇಡಿಕೆಯಿಂದ ಹುಟ್ಟುತ್ತದೆ. ಈ ಭಕ್ತಿಗೆ ದೇವರನ್ನು ಸದಾ ಚೆನ್ನಾಗಿಟ್ಟುಕೊಳ್ಳುವುದೇ ಶ್ರೇಯಸ್ಸು ಎಂಬ ನಂಬಿಕೆಯೇ ಆಧಾರ. ಹಿಂದೆ ಈ ರೀತಿ

ದೇವರನ್ನು ಸಂತೋಷಗೊಳಿಸಲು ನರಬಲಿ ಕೊಟ್ಟ ಉದಾಹರಣೆಗಳಿವೆ. ನರಬಲಿ ಅತ್ಯಂತ ದುಬಾರಿಯಾದಾಗ ಪ್ರಾಣಿಬಲಿ ಕೊಡುವ ಹಂತಕ್ಕೆ ಬರಲಾಯಿತು. ಇಷ್ಟೇ ಅಲ್ಲದೆ ಭಕ್ತನಾದವನು ತನ್ನನ್ನೇ ಉಗ್ರವಾಗಿ ಶಿಕ್ಷಿಸಿಕೊಂಡು ದೇವಿಯನ್ನು ಒಲಿಸಿಕೊಳ್ಳುವ ಅನೇಕ ವಿಧಾನಗಳಿವೆ. ಅವುಗಳಲ್ಲಿ ಕೆಲವು ಹೀಗಿವೆ:

ಸಿಡಿ ಆಡುವುದು

ಸಿಡಿ ಎಂದರೆ ಏರುವದು ಎನ್ನಬಹುದು. ಎಲ್ಲೆಲ್ಲಿ ಸಿಡಿಯಾಡುವ ಪದ್ಧತಿ ಇದೆಯೋ ಆ ಊರುಗಳ ಮಾರಿಗುಡಿಯ ಮುಂದೆ ಸಿಡಿ ಕಂಬವೊಂದು ಶಾಶ್ವತವಾಗಿ ಇರುತ್ತದೆ. ಕಲ್ಲಿನಿಂದ ಮಾಡಿದ ಈ ಸಿಡಿ ಕಂಬದ ತುದಿಯಲ್ಲಿ ಒಂದು ಕಬ್ಬಿಣದ ಸರಳನ್ನು ಜೋಡಿಸಿರುತ್ತಾರೆ. ಈ ಸರಳಿಗೆ ಸಿಡಿ ಮರದ ಒಂದು ತುದಿಯನ್ನು ಸೇರಿಸಿ ಭದ್ರವಾಗಿ ಕಟ್ಟಿರುತ್ತಾರೆ. ಅದನ್ನು ರಾಟೆಯಂತೆ ಸುತ್ತಲೂ ತಿರುಗುವ ಹಾಗೆ ಮಾಡುತ್ತಾರೆ. ಮತ್ತೊಂದು ಮೇಲ್ತುದಿಗೆ ಸಿಡಿ ಆಡುವವನನ್ನು ಕಟ್ಟುತ್ತಾರೆ. ಹಗ್ಗದ ಸಹಾಯದಿಂದ ಸಿಡಿ ಮರವನ್ನು ಕೆಳಕ್ಕೆ ಬಗ್ಗಿಸಿ, ಸಿಡಿ ಆಡುವವನನ್ನು ಕೆಳಮುಖವಾಗಿ ಮಾಡಿ ಅವನ ಬೆನ್ನಿಗೆ ವಸ್ತ್ರದಿಂದ ಬಿಗಿಯುತ್ತಾರೆ. ಇದಕ್ಕೂ ಮುಂಚೆ ಅವನ ಬೆನ್ನು ಹುರಿಯ ನರಕ್ಕೆ ಕಬ್ಬಿಣದ ಕೊಕ್ಕೆಯನ್ನು ಸಿಕ್ಕಿಸಿರುತ್ತಾರೆ. ಈ ಕೊಂಡಿಗಳನ್ನು ಸಿಡಿಮರಕ್ಕೆ ಜೋಡಿಸಿರುತ್ತಾರೆ. ಆಮೇಲೆ ಅವನನ್ನು ಮರದೊಂದಿಗೆ ನಿಧಾನವಾಗಿ ಮೇಲಕ್ಕೆ ಎತ್ತಿ, ಮೂರು ಸುತ್ತು ತಿರುಗಿಸುತ್ತಾರೆ. ಈ ಹೊತ್ತಿನಲ್ಲಿ ಇದನ್ನು ನೋಡುತ್ತಾ ನಿಂತವರು ಕಡಲೆಪುರಿಯನ್ನೂ, ಬಾಳೆಹಣ್ಣನ್ನೂ ಅವನ ಎತ್ತರಕ್ಕೆ ಎಸೆಯುವುದೂ ಉಂಟು. ಇಷ್ಟು ಹೊತ್ತಿಗೆ ಅವನಿಗೆ ಸ್ಮೃತಿ ತಪ್ಪಿ ಹೋಗಿರುತ್ತದೆ. ದೇವರಿಗೆ ಆರತಿ ಮಾಡಿ. ಅವನ ಮೇಲೆ ತೀರ್ಥವನ್ನು ಎರಚಿ, ಸಿಡಿ ಆಟವನ್ನು ಮುಗಿಸುತ್ತಾರೆ.



ಸಿಡಿ ಆಡುವುದು

ಕೊಂಡ ಹಾಯುವುದು

ಕೆಂಡದ ಮೇಲೆ ನಡೆಯುವುದನ್ನು 'ಕೊಂಡ ಹಾಯುವುದು' ಎನ್ನುತ್ತಾರೆ. ಮಾರಿಗುಡಿಯ ಮುಂದೆ ದೊಡ್ಡದಾಗಿ ಬೆಂಕಿ ಹಾಕಿ ಕೊಂಡ ಮಾಡುತ್ತಾರೆ. ಕೊಂಡಕ್ಕೆ




ಕೊಂಡ ಹಾಯುವುದು

ಸೌದೆಯನ್ನು ಮನೆಗೊಂದರಂತೆ ಸಂಗ್ರಹಿಸುತ್ತಾರೆ. ಕೊಂಡದಲ್ಲಿ ಸೌದೆ ಇಟ್ಟು, ಪೂಜಾರಿ ಪೂಜಿಸಿದ ಮೇಲೆ ಅದಕ್ಕೆ ಬೆಂಕಿ ಹಚ್ಚಲಾಗುತ್ತದೆ. ಸುತ್ತಲೂ ಜನ ಸೇರುತ್ತಾರೆ. ಹರಕೆ ಹೊತ್ತವರು ನಿಗಿನಿಗಿ ಕೆಂಡವನ್ನು ತುಳಿದುಕೊಂಡು ಒಂದೆಡೆಯಿಂದ ಮತ್ತೊಂದು ಕಡೆಗೆ ಹೋಗುತ್ತಾರೆ.

ಬಾಯಿಬೀಗ

ಹಬ್ಬ ಮುಗಿಯುವವರೆಗೂ ಮಾತಾಡಬಾರದು ಎಂದು ಹರಕೆ ಹೊತ್ತ ಜನ ಬಾಯಿಬೀಗ ಹಾಕಿಸಿಕೊಳ್ಳುತ್ತಾರೆ. ಅಕ್ಕ ಸಾಲಿಗರಿಂದ ಮಾಡಿಸಿದ ಒಂದು ವಿಶೇಷವಾದ




ಬಾಯಿಬೀಗ

ತಂತಿಯಿಂದ ತುಟಿಗಳ ಮುಖಾಂತರ ಅಥವಾ ನಾಲಿಗೆ-ಕೆನ್ನೆಗಳ ಮುಖಾಂತರ ಚುಚ್ಚಿಸಿಕೊಳ್ಳುತ್ತಾರೆ. ಹಬ್ಬ ಮುಗಿದ ಮೇಲೆ ಈ ಬಾಯಿಬೀಗ ತೆಗೆಸುತ್ತಾರೆ.

ಗಾವು ಸಿಗಿಯುವುದು

ಬಲಿಗೆ ತರುವ ಪ್ರಾಣಿಯನ್ನು ಬಾಯಿಂದಲೇ ಸೀಳುವುದನ್ನು ಗಾವು ಸಿಗಿಯುವುದು ಎನ್ನುತ್ತಾರೆ. ಕೋಳಿ-ಕುರಿ-ಮೇಕೆಗಳು ಸಾಮಾನ್ಯವಾಗಿ ಹೀಗೆ ಬಾಯಲ್ಲಿ ಸಿಗಿಯುವಂಥವು. ಗಾವು ಸಿಗಿಯುವುದಕ್ಕೆ ಮುಂಚೆ ಸಿಗಿಯುವ ವ್ಯಕ್ತಿಯನ್ನು ಮೂರು ದಿನಗಳಿಂದಲೂ ಉಪವಾಸವಿರಿಸುತ್ತಾರೆ. ವ್ಯಕ್ತಿಗೆ ಹೊಟ್ಟೆಗಿಲ್ಲದಿದ್ದಾಗ ರೋಷ-ಆವೇಶ

ಸಾಮಾನ್ಯ. ಗಾವು ಸಿಗಿಯುವ ದಿನ ಭಕ್ತರು ತಂದ ಹರಕೆಯ ಕೋಳಿಯನ್ನೋ, ಮೇಕೆಯನ್ನೋ, ಮಾರಿಗುಡಿಯ ಮುಂದಕ್ಕೆ ಎಳೆದು ತರುತ್ತಾರೆ. ಮುಂದಿನ ಕಂಬಕ್ಕೆ ಆ ಮರಿಯನ್ನು ಕಟ್ಟಿ ಪೂಜೆ ಮಾಡುತ್ತಾರೆ. ಗಾವು ಸಿಗಿಯುವ ವ್ಯಕ್ತಿಯನ್ನು ವಾದ್ಯಗಳ



ಗಾವು ಸಿಗಿಯುವುದು

ಸಮೇತ ಅಲ್ಲಿಗೆ ಕರೆತರುತ್ತಾರೆ. ವಾದ್ಯಗಳ ಮೊಳಗು ಜೋರಾಗುತ್ತದೆ. ಆವನಿಗೆ ಆವೇಶ ಬಂದಂತಾಗಿ ಯಾವುದೇ ಆಯುಧದ ನೆರವು ಇಲ್ಲದೆ ತನ್ನ ಬಾಯಿಂದಲೇ ಬಲಿ ಪ್ರಾಣಿಯನ್ನು ಸೀಳಿ ಹಾಕುತ್ತಾನೆ. ಅವನ ಬಾಯಿಂದ ರಕ್ತ ಹರಿಯುತ್ತಿರುತ್ತದೆ. ಮೈಮೇಲೆಲ್ಲ ರಕ್ತದ ಓಕುಳಿ. ಅವನು ಆವೇಶದಿಂದ ಕುಣಿಯುತ್ತಾ ಮೂರ್ಛೆ ಬೀಳುತ್ತಾನೆ. ಅವನ ಮೇಲೆ ತೀರ್ಥವನ್ನು ಎರಚಿ ಕರೆದೊಯ್ಯುತ್ತಾರೆ.

ಛಡಿ ಸೇವೆ

ಹರಕೆ ಹೊತ್ತ ಭಕ್ತ ದೇವಿಯ ಮುಂದೆ ಬರಿ ಮೈಗೆ ಚಾವಟಿಯಿಂದ ಹೊಡೆದು ಕೊಳ್ಳುವುದೇ 'ಛಡಿಸೇವೆ'. ಎಲ್ಲಿಯವರೆಗೆ ಅವನು ಏಟುಗಳನ್ನು ಸಹಿಸಬಲ್ಲನೋ ಅಲ್ಲಿಯವರೆಗೆ ಹೊಡೆದುಕೊಳ್ಳುತ್ತಾನೆ. ಸಹಿಸಲು ಆಗದಾಗ ಮೂರ್ಛೆ ಬೀಳುತ್ತಾನೆ.

ಪ್ರಾದೇಶಿಕ ವ್ಯತ್ಯಾಸಗಳು

ಕರ್ನಾಟಕದ ಬೇರೆ ಬೇರೆ ಭಾಗಗಳಲ್ಲಿ ಮಾರಿಹಬ್ಬದ ಸ್ವರೂಪ ಮತ್ತು ಆಚರಣೆಗಳು ಸಾಮಾನ್ಯವಾಗಿ ಒಂದೇ ಆದರೂ ಕೆಲವು ಕಡೆಗಳಲ್ಲಿ ಆಚರಣೆಗಳು ಬೇರೆ ಬೇರೆಯಾಗಿರುವುದನ್ನು ಕಾಣುತ್ತೇವೆ.

ಉತ್ತರ ಕನ್ನಡ ಜಿಲ್ಲೆಯ ಭಟ್ಕಳದಲ್ಲಿ ಮಾರಿಯನ್ನು ಪೂಜಿಸುವವರು, ಗೊಂಡರು. ಮಾರಿಯ ಮೂರ್ತಿಯನ್ನು ಅಮ್ಟೆ ಮರದ ತುಂಡಿನಲ್ಲಿ ಮಾಡುವವನು ಆಚಾರಿ. ಮಾರಿಯನ್ನು ಹೊತ್ತು ತರುವವನು ಕೊರಗ(ಮಾದಿಗ)ರವನು. ಇವನು ಮಾರಿಯ ಗಂಡ ಎಂದು ಹೇಳುತ್ತಾರೆ. ಹಬ್ಬದ ದಿನ ಇವನಿಗೆ ಪೇಟ ಕಟ್ಟಿ, ಹಾರಹಾಕಿ ಸಿಂಗರಿಸುತ್ತಾರೆ. ಆ ದಿನ ಅವನ ಮನೆಯಲ್ಲಿ ಐದು ಬುಟ್ಟಿ ಅನ್ನ, ಐವತ್ತೆರಡು ಚಿಪ್ಪುಗಳಲ್ಲಿ ಕಳ್ಳು ಅಥವಾ ಸಾರಾಯಿಯನ್ನು ತುಂಬಿಡುತ್ತಾರೆ. ಮಾರಿ ಗಂಡನನ್ನು ಕರೆದುಕೊಂಡು ಡೋಲು ಬಾರಿಸುತ್ತಾ, ಕೊಳಲೂದುತ್ತಾ ಮದುವೆಯ ದಿಬ್ಬಣ ಮಾರಿಗುಡಿಗೆ ಬರುತ್ತದೆ. ಅಲ್ಲಿದ್ದ ಗೊಂಡರನ್ನು ಎಬ್ಬಿಸಿ ಕರೆದುಕೊಂಡು ಈ ಗುಂಪು ಆಚಾರಿಯ ಮನೆಗೆ ಬರುತ್ತದೆ. ದಿಬ್ಬಣ ಬಂದ ಮೇಲೆ ಆಚಾರಿ, ಮಾರಿಗಂಡನಿಗೆ ಒಂದು ಹೋಳು ತೆಂಗಿನಕಾಯಿ, ಕೆಸುವಿನ ಸೊಪ್ಪು, ಹರಿಗೆ ಸೊಪ್ಪು, ಅರ್ಧ ಸಿದ್ದಿ ಎಣ್ಣೆ, ಕುಂಕುಮ, ಹೂವು ಮತ್ತು ಬಾಳೆಹಣ್ಣು ಕೊಡುತ್ತಾನೆ. ಮಾರಿಗಂಡ ಅದನ್ನು ತನ್ನ ಕಡೆಯ ಹೆಂಗಸರಿಗೆ ಕೊಡುತ್ತಾನೆ. ಅವರು ಕಂಕುಮವನ್ನು ಮಾರಿಗಂಡನ ಮುಖಕ್ಕೆ ಬಳಿದು, ತಲೆಗೆ ಹೂ ಮುಡಿಸಿ, ಸೊಂಟಕ್ಕೆ ಸೊಪ್ಪು ಕಟ್ಟುತ್ತಾರೆ. ಆಮೇಲೆ ಆಚಾರಿಯು

ಮಾರಿಯ ಮೂರ್ತಿಯನ್ನು ಗೊಂಡನಿಗೆ ಕೊಡುತ್ತಾನೆ. ಆಗ ಮಾರಿಗಂಡನ ಕಡೆಯವರು ಯಾರೂ ಆ ಮೂರ್ತಿಯನ್ನು ಮುಟ್ಟಬಾರದು. ಗೊಂಡರು ಮೂರ್ತಿಯನ್ನು ಹೊತ್ತು ಕೊಂಡು, ಮಾರಿಗಂಡನನ್ನು ಮುಂದು ಮಾಡಿಕೊಂಡು ಡೋಲು ಬಾರಿಸುತ್ತಾ, ಕೊಳಲೂದುತ್ತಾ ಮಾರಿಗುಡಿಗೆ ಬರುತ್ತಾರೆ. ಹೀಗೆ ಮಾರಿ ತರುವಾಗ ಅದಕ್ಕೆ ಎದುರು ಯಾರೂ ಬರಬಾರದು. ಬಂದರೆ ಏನಾದರೂ ಆಪತ್ತು ಖಚಿತ ಎಂದು ನಂಬಿಕೆ. ಮಾರಿಗುಡಿ ಸೇರಿದ ನಂತರ ಕೊರಗರು ತಮ್ಮ ಮನೆಗೆ ಹಿಂದಿರುಗಿ ಅಲ್ಲಿ ಇಟ್ಟು ಬಂದಿದ್ದ ಅನ್ನ ಮತ್ತು ಕಳ್ಳನ್ನು ಸೇವಿಸುತ್ತಾರೆ.

ಪೂಜಾ ವಿಧಾನ

ಇಲ್ಲಿ ಪೂಜಾರಿಯಾದ ಗೊಂಡ ಭಕ್ತರಿಂದ ಹೂ-ಹಣ್ಣು ಸ್ವೀಕರಿಸುತ್ತಾನೆ. ಮಾರಿಯ ಗಂಡನಾದ ಕೊರಗರವನು ಹರಕೆಯ ಪ್ರಾಣಿಗಳನ್ನು ಕಡಿದು, ಅವುಗಳ ರಕ್ತವನ್ನು ಬಾಳೆದಿಂಡಿನ ಚೂರುಗಳಿರುವ ಬುಟ್ಟಿಯಲ್ಲಿ ಸಂಗ್ರಹಿಸುತ್ತಾನೆ. ಅದೇ ಚರು. ಅದನ್ನು ಊರಿನ ಸುತ್ತ ಚೆಲ್ಲುತ್ತಾರೆ. ಮಾರಿಯ ಪೂಜೆಯನ್ನು ಗೊಂಡ, ಮೂರು ದಿನ ಮಾಡಿ ಅನಂತರ ಕೊರಗರಿಗೆ ಒಪ್ಪಿಸುತ್ತಾನೆ. ಹೀಗೆ ಒಪ್ಪಿಸಿಕೊಡುವ ಮುಂಚೆ ಗುಡಿಯಲ್ಲು ಬೆಂಕಿ ಹಾಕಿ ಮಾರಿ ಮೂರ್ತಿಯನ್ನು ಅರ್ಧ ಮಾತ್ರ ಸುಡುತ್ತಾರೆ. ಅರ್ಧ ಸುಟ್ಟ ಮಾರಿಯನ್ನು ಹೊತ್ತುಕೊಂಡು, ಹೋ ಹೋ ಎಂದು ಕೂಗುತ್ತಾ ಕೊರಗರವರು ಮಾರಿಗುಂಡಿಗೆ ಒಯ್ದು ಹಾಕುತ್ತಾರೆ. ಆಗ ದಾರಿಯಲ್ಲಿ ಕುರಿ-ಕೋಳಿಗಳನ್ನು ಬಲಿ ಕೊಡುತ್ತಾರೆ. ಮಾರಿಗುಂಡಿಗೆ ಒಯ್ದು ತಕ್ಷಣ ಕೆಳಗಿಳಿಸಿ, ಮಾರಿಗಂಡ ಪೂಜೆ ಮಾಡುತ್ತಾನೆ. ಅನಂತರ ಮಾರಿಯ ಕೈ-ಕಾಲುಗಳನ್ನು ಕತ್ತರಿಸಿ ಸಮುದ್ರದಲ್ಲಿ ಎಸೆಯುತ್ತಾರೆ.

ಮಾರಿ ಕಳಿಸುವುದು ಅಥವಾ ಓಡಿಸುವುದು


ಮಲೆನಾಡು ಮತ್ತು ಕರಾವಳಿ ಜಿಲ್ಲೆಗಳಲ್ಲಿ ಈ ಪದ್ಧತಿ ಇದೆ. ಮಾರಿ ಉಗ್ರ ದೇವತೆ, ಅವಳ ಕಣ್ಣಿಗೆ ಬಿದ್ದರೆ ಕೇಡು, ಊರಿಗೆ ರೋಗ. ನಂಬಿಕೆಗಳ ಹಿನ್ನೆಲೆಯಲ್ಲಿ ಈ ಮಾರಿಯನ್ನು ಓಡಿಸುವ ಆಚರಣೆ ಬಳಕೆಗೆ ಬಂದಿದೆ. ಮಾರಿಹಬ್ಬದ ಸಂದರ್ಭದಲ್ಲಿ

ತಮ್ಮ ತಮ್ಮ ಊರುಗಳಲ್ಲಿ ಹರಿದ ಬುಟ್ಟಿ, ತಡಿಕೆ ಇತ್ಯಾದಿ ಹಳೆಯ ಸಾಮಾನುಗಳನ್ನು ಒಂದು ಕಡೆ ಕೂಡಿಡುತ್ತಾರೆ. ಇದನ್ನು ''ಮಾರಿ ಒಜ್ಜೆ'' ಎಂದು ಕರೆಯುವುದೂ ಇದೆ. ಸಾಮಾನ್ಯವಾಗಿ ದೊಡ್ಡರಸ್ತೆಯ ಪಕ್ಕದಲ್ಲಿ ಈ ಒಜ್ಜೆಗಳಿದ್ದು ಇದರ ಪಕ್ಕ ಒಂದು ಕೋಲಿಗೆ ಮಾರಿಯ ಮೂರ್ತಿಯನ್ನು ಮಾಡಿ ನಿಲ್ಲಿಸುತ್ತಾರೆ. ಈ ಮೂರ್ತಿಗೆ ಭಕ್ತರು ಪೂಜೆ ಮಾಡಿ ನಮಸ್ಕರಿಸುತ್ತಾರೆ. ಎಲ್ಲರೂ ತಮ್ಮ ತಮ್ಮ ಮನೆಗಳಲ್ಲಿನ ಹರಿದ ಬುಟ್ಟಿಯನ್ನು ಆಕೆಗೆ ಒಪ್ಪಿಸಿ ಮಾರಿ ಒಜ್ಜೆಯ ಬಳಿ ಸುಟ್ಟು ಹಾಕುತ್ತಾರೆ. ಇದೇ ರೀತಿ ಹರಿದ ಮೊರ, ಹರಿದ ಅಂಗಿ, ಕಸಬರಿಕೆ, ಚಪ್ಪಲಿ ಎಲ್ಲವುಗಳನ್ನೂ ತಂದು ಊರ ಹೊರಗೆ ಎಸೆಯುತ್ತಾರೆ. ಇದು ಹೀಗೇ ಒಂದೂರಿಂದ ಮತ್ತೊಂದು ಊರಿಗೆ ಸಾಗುತ್ತಾ ಕೊನೆಗೆ ಸಮುದ್ರ ತೀರ ಸೇರುತ್ತದೆ. ಇದೇ ಮಾರಿಯನ್ನು 'ದೂಡುವ' ಸಂಪ್ರದಾಯ.

ಬಯಲು ನಾಡಿನ ಕಡೆ ಮಾರಿ ಕಳಿಸುವಂಥ ಪದ್ಧತಿಯಿಲ್ಲ. ಇಲ್ಲಿಯ ಎಲ್ಲ ಚಟುವಟಿಕೆಗಳಿಗೂ ಮಾರಿಸೇವೆ ಅಥವಾ ಮಾರಿಪೂಜೆ ಎಂದು ಕರೆಯುತ್ತಾರೆ. ಈ ಕಡೆಯ ವಿಶೇಷ ಆಕರ್ಷಣೆಗಳೆಂದರೆ ಕುಣಿತ ಸೇವೆ, ಘಟಸೇವೆ, ಮಡೆಸೇವೆ, ತಳಿಗೆಸೇವೆ ಮುಂತಾದವು.

ಕುಕ್ಕೆ ಮಾರಮ್ಮ

ಮಾರಿಹಬ್ಬದ ದಿನ ಒಬ್ಬ ಭಕ್ತ ಸೀರೆಯುಟ್ಟುಕೊಂಡು, ಮೈಗೆ ಅರಿಶಿನ-ಕುಂಕುಮ ಬಳಿದುಕೊಳ್ಳುತ್ತಾನೆ. ತಲೆಯ ಮೇಲೆ ಅಗಲವಾದ ಕುಕ್ಕೆ ಹೊತ್ತಿರುತ್ತಾನೆ. ಕುಕ್ಕೆಯ ಒಳಗೆ ಅಮ್ಮನ ಭಂಡಾರವಿರುತ್ತದೆ. ಕುಕ್ಕೆಯ ಅಂಚಿಗೆ ಬೇವಿನ ಸೊಪ್ಪು ಕಟ್ಟಿರುತ್ತಾರೆ. ಅವು ಬಹುಭಾಗ ಭಕ್ತನನ್ನು ಮುಚ್ಚಿಕೊಂಡಿವೆ. ಎರಡೂ ಕೈಯನ್ನು ಮೇಲಕ್ಕೆತ್ತಿ ಭಕ್ತ ಕುಕ್ಕೆಯನ್ನು ಮೇಲಿಟ್ಟುಕೊಂಡಿದ್ದಾನೆ. ಕಾಲಿಗೆ ಗೆಜ್ಜೆ ಕಟ್ಟಿರುತ್ತಾರೆ. ಮುಂದೆ ತಮ್ಮಟೆಯ ತಾಳಗತಿಯನ್ನನುಸರಿಸಿ ಕುಣಿಯುತ್ತಾ ಸುಧಾರಿಸಿ ಕೊಳ್ಳುತ್ತಾ ಊರ ಗಡಿಯಾದ ಕರಿಕಲ್ಲಿನವರೆಗೂ ಬರುತ್ತಾನೆ. ಈ ಭಕ್ತನಿಗೆ ಸಹಾಯಕನಾಗಿ ಮತ್ತೊಬ್ಬ ಉಪಸೇವಕ ಇರುತ್ತಾನೆ. ಈತ ಸೊಂಟದಿಂದ ಕೆಳಗಿನ ಮಂಡಿಯವರೆಗೂ 'ವೀರಗಸೆ' ಹಾಕಿರುತ್ತಾನೆ. ಉಳಿದಂತೆ ಮೈತುಂಬ ಅರಿಶಿನ-ಕುಂಕುಮ, ಕೈಯಲ್ಲಿ ಸೆಣಬಿನಿಂದ ಹೊಸೆದ ಗಟ್ಟಿಯಾದ ಚಾಟಿ ಇರುತ್ತದೆ. ಮಾರಮ್ಮನ ಜತೆ ಕುಣಿಯುತ್ತ ಮಧ್ಯೆ ಮಧ್ಯೆ ಚಾಟಿಯಲ್ಲಿ ಮೈಗೆ ಹೊಡೆದುಕೊಳ್ಳುತ್ತಾನೆ. ಕುಕ್ಕೆ ಮಾರಿಯನ್ನು ಹೊತ್ತವನ ಸುತ್ತ ಈತ ತಮ್ಮಟೆಯ



ಕುಕ್ಕೆ ಮಾರಮ್ಮ

ಗತಿಗೆ ಅನುಸಾರವಾಗಿ ವೇಗವಾಗಿ ಕುಣಿಯುತ್ತಾನೆ. ಈ ಇಬ್ಬರನ್ನೂ ಮಾರಮ್ಮನ ಸೇವಕರು ಎಂದು ಹೇಳುತ್ತಾರೆ. ಇದೇ ಕುಕ್ಕೆ ಮಾರಮ್ಮನನ್ನು ಕೆಲವು ಕೆಳವರ್ಗದ ಜನ ಪೂಜಿಸುತ್ತಾರೆ. ಕುಕ್ಕೆಯಲ್ಲಿ ಮಾರಮ್ಮನ ಮುಖವಾಡವನ್ನು ಇಟ್ಟುಕೊಂಡು ಅದನ್ನು ತಲೆಯ ಮೇಲೆ ಹೊತ್ತು ಊರೂರು ಅಲೆದು ಭಿಕ್ಷೆ ಮಾಡುತ್ತಾರೆ. ತಲೆಮೇಲೆ ಕುಕ್ಕೆ ಮಾರಮ್ಮನನ್ನು ಹೊರುವವಳು ಸಾಮಾನ್ಯವಾಗಿ ಹೆಣ್ಣು. ಅವಳ ಹೆಗಲ ಕಳೆಗೆ 'ಹರೆ' ಇರುತ್ತದೆ. ಕಂಕುಳ ಜೋಳಿಗೆಯಲ್ಲಿ ಒಂದು ಮಗು ಇರುತ್ತದೆ. ಬಲಹೆಗಲ ಜೋಳಿಗೆ ಭಿಕ್ಷೆಗಾಗಿ. ಈಕೆ ಒಬ್ಬಳೇ ಮನೆ ಮನೆಯನ್ನು ಸುತ್ತಿ ಮಾರಮ್ಮನನ್ನು ಕುರಿತ ಹಾಡುಗಳನ್ನು ಹೇಳಿ ಭಿಕ್ಷೆ ಬೇಡುತ್ತಾಳೆ. ಹೀಗೆ ಊರೊಳಗೆ ನಡೆಯುತ್ತಿದ್ದ ಕುಕ್ಕೆ ಮಾರಿ ಕುಣಿತ, ಒಂದು ಜನಾಂಗದ ಭಿಕ್ಷೆಯ ಮಾರ್ಗ ಆಗಿರುವುದು ಒಂದು ವಿಶೇಷ.

ಪೆಟ್ಟಿಗೆ ಮಾರಿ

ಮೂರು ಅಡಿ ಅಗಲ, ನಾಲ್ಕು ಅಡಿ ಉದ್ದದ ಒಂದು ಪೆಟ್ಟಿಗೆಯೊಳಗೆ ಮಾರಮ್ಮನನ್ನು ವಿಶೇಷವಾದ ಒಡವೆ-ಅಲಂಕಾರಗಳಿಂದ ಸಿಂಗರಿಸಿರುತ್ತಾರೆ. ಈ ಪೆಟ್ಟಿಗೆ ಸ್ವಲ್ಪಮಟ್ಟಿಗೆ ತೂಕವಾಗಿರುತ್ತದೆ. ಇದನ್ನು ತಲೆಯ ಮೇಲೆ ಸಿಂಬಿ ಹಾಕಿಕೊಂಡು ಗಂಡ-ಹೆಂಡಿರಲ್ಲಿ ಯಾರಾದರೊಬ್ಬರು ತಲೆಯಮೇಲೆ ಹೊತ್ತುಕೊಳ್ಳುತ್ತಾರೆ. ಸಾಮಾನ್ಯವಾಗಿ ಇದನ್ನು ಹೊರುವವಳು ಹೆಣ್ಣೇ. ಅವಳು ಕೊರಳಿಗೆ 'ಹರೆ' ನೇತು ಹಾಕಿಕೊಂಡಿರುತ್ತಾಳೆ. ಅದನ್ನು ಬಡಿಯುತ್ತಾ ಹಾಡು ಹೇಳುತ್ತಾಳೆ.

ಮಾರಮ್ಮ ಬರುತಾಳೆ
ಮಾಟಾವ ತರುತಾಳೆ
ಸಿಡುಬಿನಾ ತಾಯಿ ಬರುತಾಳೆ
ಸೀತಾಳೆ ತಾಯಿ ಬರುತಾಳೆ

ಹೀಗೆ ಹಾಡುತ್ತಿರುವಾಗ ವೀರಗಾಸೆ ಹಾಕಿಕೊಂಡ ಗಂಡ ಕಾಲಿಗೆ ಗೆಜ್ಜೆ ಕಟ್ಟಿಕೊಂಡು, ಮೈ ಕೈಗೆಲ್ಲ ಅರಿಶಿನ ಕುಂಕುಮ ಬಳಿದುಕೊಂಡು ಚಾಟಿಯಿಂದ ಹೊಡೆದುಕೊಳ್ಳುತ್ತಾ ಕುಣಿಯುತ್ತಾನೆ. ಚಾಟಿಯಿಂದ ಹೊಡೆದುಕೊಳ್ಳುವಾಗ ಮೈ ಕೈಗಳಲ್ಲಿ ರಕ್ತ ಬರುವುದುಂಟು. ಈ ರಕ್ತವನ್ನು ತೋರಿಸಿ ಹೆಚ್ಚು ಕಾಣಿಕೆಗಾಗಿ ಒತ್ತಾಯಿಸುತ್ತಾನೆ. ಹೀಗೆ ಕುಕ್ಕೆಯಲ್ಲಿ ಮತ್ತು ಪೆಟ್ಟಿಗೆಯಲ್ಲಿ ಮಾರಿಯನ್ನು ಹೊತ್ತು ತಿರುಗುವ ಜನರಿಗೆ 'ಅಲೆಮಾರಿ'ಗಳೆಂದು ಜನ ಕರೆದಿದ್ದಾರೆ.

ಘಟಸೇವೆ

'ಘಟ' ಎಂದರೆ ಮಡಕೆ. ಗಡಿಗೆ ಅಥವಾ ಹರವಿಯ ತುಂಬ ಹೆಂಡವನ್ನು ತುಂಬಿ ಅದನ್ನು ಮಾರಮ್ಮನಿಗೆ ಒಪ್ಪಿಸುವುದಕ್ಕೆ ಘಟಸೇವೆ ಎನ್ನುತ್ತಾರೆ. ಈ ಸೇವೆ ಜಾತ್ರೆಯ ಸಂದರ್ಭದಲ್ಲಿ ಮಾತ್ರ ನಡೆಯುತ್ತದೆ. ಮಾರಮ್ಮ ತನ್ನ ಸಹ ದೇವತೆಗಳ ಜೊತೆಯಲ್ಲಿ ಊರ ಹೊರಗೆ ಹೋಗುತ್ತಾಳೆ. ಅವಳೆದುರಿಗೆ ಬೂತಪ್ಪ-ಪಾತಪ್ಪ ಎಂಬ ಎರಡು ಸೋಮಗಳಿರುತ್ತವೆ. ಇವು ಬಣ್ಣದ ಮುಖವಾಡಗಳು. ಊರ ಹೊರಗೆ ಬೀದಿಯ ಮಧ್ಯೆ ಮೂರು ದೊಡ್ಡ ಹರವಿಗಳಲ್ಲಿ ಹೆಂಡವನ್ನು ತುಂಬಿಡುತ್ತಾರೆ. ಈ ಹೆಂಡ ಈಚಲು ಮರದಿಂದ ದೇವರಿಗೆಂದೇ ಪ್ರತ್ಯೇಕವಾಗಿ ತೆಗೆದಿದ್ದು ಮಣ್ಣಿನಲ್ಲಿ ಒಂದು ಚಿಕ್ಕ ದಿಬ್ಬವನ್ನು ಮಾಡಿ ಈ ಮೂರೂ ಹರವಿಗಳನ್ನು ಒಂದರ ಪಕ್ಕ ಒಂದು ಇಡುತ್ತಾರೆ. ಈ ಪ್ರತೀ ಹರವಿಗೆ ಹಸೀ ಈಚಲು ಇರುವ ಕಡ್ಡಿಯನ್ನು ಇಡುತ್ತಾರೆ. ಈ ಕಡ್ಡಿಯಿಂದ ಹೆಂಡವನ್ನು ಮೂರು ಜನ ಒಟ್ಟಿಗೆ ಕೂಡ ಕಡೆಯುತ್ತಾರೆ. ಬಿರ ಬಿರನೆ ಕಡೆಯುವಾಗ ಹೆಂಡದಿಂದ ನೊರೆ ಉಕ್ಕಿ ಬರುತ್ತದೆ. ಇದನ್ನು 'ಘಟ ಉಕ್ಕಿಸುವುದು' ಎಂದು ಕರೆಯುತ್ತಾರೆ. ಈ ಸಮಯದಲ್ಲಿ ಬೂತಪ್ಪ-ಪಾತಪ್ಪಗಳು ಅತಿ ಸಂತೋಷದಿಂದ ನೆಗೆದು ಹಾರಿ ಕುಣಿಯುತ್ತವೆ.

ಮಡೆಸೇವೆ

ಮಡಕೆಯಲ್ಲಿ ಹೊಸ ಅಕ್ಕಿಯಿಂದ ಅನ್ನವನ್ನು ಮಾಡಿ ಮಾರಿ ಗುಡಿಗೆ ಅರ್ಪಿಸುವುದೇ ಮಡೆ ಸೇವೆ. ಹೊಸ ಮಡಕೆಯಲ್ಲಿ ಹೊಸ ಅಕ್ಕಿ ಹಾಕಿ ಶಾಸ್ತ್ರೋಕ್ತವಾಗಿ ಅನ್ನ ತಯಾರಿಸುತ್ತಾರೆ. ಈ ಅನ್ನಕ್ಕೆ ತರಕಾರಿಯಿಂದ ಮಾಡಿದ ಮೇಲೋಗರವನ್ನೋ ಮೊಸರನ್ನೋ ಹಾಕುವುದುಂಟು. ವಿಶೇಷ ಸಂದರ್ಭಗಳಲ್ಲಿ ಮೊಟ್ಟೆ ಮತ್ತು ಕೋಳಿ ಬಾಡಿನ ಎಸರನ್ನೂ ಸೇರಿಸಬಹುದು. ಇದು ಜಾತ್ರೆಯಲ್ಲಿ ಅಥವಾ ವಿಶೇಷ ಸಂದರ್ಭದಲ್ಲಿ ಮಾತ್ರ ನಡೆಯುವ ಸೇವೆ.

ತಳಿಗೆ ಸೇವೆ

'ತಳಿಗೆ ಸೇವೆ' ಎಲ್ಲ ದೇವರಿಗೂ ಉಂಟು. ಮಾರಮ್ಮನಿಗೆ ಮೂರು ಬಗೆಯ ತಳಿಗೆಗಳಿವೆ. ಮೊಸರನ್ನ ತಳಿಗೆ, ಮೊಟ್ಟೆ ತಳಿಗೆ ಮತ್ತು ಬಾಡೆಸರಿನ ತಳಿಗೆ. ಬಾಡು

ಎಂದರೆ ಮಾಂಸ. ದೇವರಿಗೆ ಒಪ್ಪಿಸಿದ ಕೋಳಿ ಅಥವಾ ಕುರಿಯಿಂದ ವಿಶೇಷ ಭಾಗಗಳನ್ನು ತೆಗೆದುಕೊಂಡು ಸಾರು ಮಾಡಲಾಗುತ್ತದೆ. ಒಂದು ಪಾತ್ರೆಯಲ್ಲಿ ಈ ಸಾರು, ಮತ್ತೊಂದು ಪಾತ್ರೆಯಲ್ಲಿ ಅನ್ನ ಮತ್ತು ಮುದ್ದೆಯನ್ನು ಇಟ್ಟುಕೊಳ್ಳಲಾಗುತ್ತದೆ. ಅದರ ಮೇಲೆ ಬಟ್ಟೆಯನ್ನು ಮುಚ್ಚಬೇಕು. ಮಾರಮ್ಮನಿಗೆ ಮಾಂಸದ ಸಾರು ಇಷ್ಟವೆಂದು ನಂಬಿಕೆ. ಬಡವರಿಗೆ ಕೋಳಿ-ಕುರಿಯನ್ನು ಕೊಡಲು ಸಾಧ್ಯವಾಗದಿರಬಹುದು. ಆಗ ಅವರು ಒಂದು ಬೇಯಿಸಿದ ಕೋಳಿ ಮೊಟ್ಟೆಯನ್ನು ಮಾರಮ್ಮನಿಗೆ ಒಪ್ಪಿಸಬೇಕು. ಮಾಂಸಾಹಾರಿಗಳಲ್ಲದವರು ಮಾಡುವ ತಳಿಗೆ, ಮೊಸರನ್ನ ತಳಿಗೆ. ಮೀಸಲು ಅನ್ನಕ್ಕೆ ಮೀಸಲು ಮೊಸರನ್ನು ಹಾಕಿಕೊಂಡು ಮಾರಿಗೆ ಒಪ್ಪಿಸುತ್ತಾರೆ. ಈ ಸಸ್ಯಾಹಾರಿಗಳು ಒಂದು ಕೋಳಿಗೆ ಆಗುವ ಖರ್ಚನ್ನು ಮಾಂಸಾಹಾರಿಗಳ ಮನೆಗೆ ಕೊಟ್ಟು, ಅವರ ಮೂಲಕ ತಮ್ಮ ಪರವಾಗಿ ಮಾಂಸದ ತಳಿಗೆಯನ್ನು ದೇವರಿಗೆ ಕೊಡುವುದೂ ಉಂಟು.

ತಂಬಿಟ್ಟು-ತುಪ್ಪ ಮತ್ತು ಬೇಯಿಸಿ ಒಟ್ಟಿಗೇ ಸೇರಿಸಿದ ಹುರುಳೀಕಾಳು ಅವರೇಕಾಳುಗಳನ್ನು ಅರ್ಪಿಸುವುದು ಮತ್ತೊಂದು ವಿಧದ ಸೇವೆ.

ಇಲ್ಲಿಯ ಮಾರಮ್ಮನ ಪೂಜೆಯ ಕೆಲವು ವಿಶೇಷಗಳನ್ನು ನಾವು ಗಮನಿಸೋಣ. ಮಾರಮ್ಮನ ಪ್ರಸಾದ ಬೇವಿನ ಸೊಪ್ಪು. ಅವಳ ಇಷ್ಟದ ಹೂವು ಮಾರಿಕಣಗಿಲೆ. ಮಾರಮ್ಮನ ಪೂಜಾರಿ ಭಕ್ತರಿಗೆಲ್ಲಾ ಬೇವಿನ ಸೊಪ್ಪಿನ ಪ್ರಸಾದ ಕೊಡುತ್ತಾನೆ. ಮಾರಿಗೂ-ಬೇವಿನ ಸೊಪ್ಪಿಗೂ ನಿಕಟವಾದ ಸಂಬಂಧವಿದೆ. ಬೇವಿನ ಮರ ದ್ರಾವಿಡ ಜನಾಂಗದ ಸಂಕೇತವೆಂದೂ, ಅರಳೀಮರ ಆರ್ಯ ಜನಾಂಗದ ಸಂಕೇತವೆಂದೂ ಹೇಳುತ್ತಾರೆ. ಅರಳೀಮರ ಗಂಡು ಎಂದೂ, ಬೇವಿನ ಮರ ಹೆಣ್ಣು ಎಂದೂ ಹೇಳುವುದಿದೆ. ಈ ಎರಡೂ ಮರಗಳನ್ನು ಅಕ್ಕಪಕ್ಕ ನೆಟ್ಟು, ಕಲ್ಲು ಕಟ್ಟೆಕಟ್ಟಿ ಪೂಜಿಸುತ್ತಾರೆ. ಇವೆರಡರ ಕೂಡುವಿಕೆಯ ಹಿಂದೆ ಬೇರೆ ಬೇರೆ ಸಂಸ್ಕೃತಿಗಳು ಒಟ್ಟು ಸೇರುವುದನ್ನು ಗಮನಿಸಬಹುದು.

ಕೂಗಿನ ಮಾರಿ ಎಂಬ ಒಂದು ದೇವತೆಯಿದೆ. ಅದು ಅರ್ಧ ರಾತ್ರಿಯಲ್ಲಿ ಮನೆ ಮುಂದೆ ಬರುತ್ತದೆ. ಮಲಗಿದ್ದವರೊಬ್ಬರ ಹೆಸರು ಹಿಡಿದು ಕೂಗುತ್ತದೆ. ಆ ಕೂಗಿಗೆ ಅವರು ಓಗೊಟ್ಟರೆ ನೆಗೆದು ಬಿದ್ದಂತೆಯೇ ಎಂದು ಜನ ನಂಬುತ್ತಾರೆ. ಆದ್ದರಿಂದ ಹಳ್ಳಿಯ ಜನ ತಮ್ಮ ಮನೆ ಬಾಗಿಲ ಮೇಲೆ 'ನಾಳೆ ಬಾ' ಎಂದು ಬರೆದಿರುತ್ತಾರೆ. ಪ್ರತಿದಿನ ಬಂದಾಗಲೂ ಆ ನಾಳೆ ಬಾ ಬರಹವನ್ನು ನೋಡಿಕೊಂಡು ತೊಲಗಲಿ ಎಂಬುದೇ ಜನರ ಅಭಿಪ್ರಾಯ.

ಜನ ಮಾರಮ್ಮನಿಗೆ ಹೆದರಿ ಪೂಜೆ ಮಾಡುತ್ತಾರೆ. ಕಾಯಿಲೆ-ಕಸಾಲೆ ಪರಿಹಾರ ಮಾಡಲು ಬೇಡುತ್ತಾರೆ. ಮಾರಮ್ಮನ ಅರಿಶಿನ-ಕುಂಕುಮ ಜನರಿಗೆ ಮಂತ್ರವಿದ್ದಂತೆ. ಬೇವಿನಸೊಪ್ಪು ಪ್ರಸಾದ ಮಹಾ ಔಷಧ. ಅವಳ ತೀರ್ಥ ಎಲ್ಲ ರೋಗಗಳ ಪರಿಹಾರಿ. ಅವಳ ಮಾತು ಬ್ರಹ್ಮೋಪದೇಶ. ಅವಳು ಕಟ್ಟಿಕೊಡುವ ಕಟ್ಟಳೆಗಳು, ಮಂತ್ರಿಸಿಕೊಡುವ ಕಾಯಿ, ಬರೆಯುವ ಮಂಡಲಗಳು ಏಳು ಸುತ್ತಿನ ಕೋಟೆಯ ರಕ್ಷಣೆಯಿದ್ದ ಹಾಗೆ. ಹಿಡಿದ ದೆವ್ವ ಭೂತಗಳನ್ನು ಅವಳು ಅರಚಾಡುವಂತೆ ಹೊಡೆದು ಓಡಿಸುತ್ತಾಳೆ. ಮಾರಮ್ಮನ ಹೆಸರಲ್ಲಿ ಕಟ್ಟುವ ತಾಯಿತಗಳು ಬಡ ಜನರ ಪಾಲಿಗೆ ಸಂಜೀವಿನಿ.

ಈಗ ಕಾಲ ಬದಲಾಗಿದೆ. ಮಾನವನ ಮನಸ್ಸು ಬೆಳವಣಿಗೆ ಹೊಂದಿದೆ. ಅವನು ಭಯ ಮತ್ತು ಹೆದರಿಕೆಯಿಂದ ಏನನ್ನೂ ಮಾಡಬೇಕಿಲ್ಲ. ತಿಳುವಳಿಕೆ ಮತ್ತು ವಿವೇಚನೆ ಅವನ ಕೈಲಿದೆ. ಇದರಿಂದ ನಮಗೆ ತಿಳಿದು ಬರುವುದು ಏನೆಂದರೆ, ಊರಮ್ಮ ಮತ್ತು ಮಾರಮ್ಮ ನಮ್ಮ ಮಿತ್ರ ದೇವತೆಗಳೂ ಅಲ್ಲ; ಶತ್ರು ದೇವತೆಗಳೂ ಅಲ್ಲ; ನಮ್ಮ ಹಿಂದಿನ ಮನಸ್ಥಿತಿಯಿಂದ ಹುಟ್ಟಿದಂಥವು. 'ಒಲಿದರೆ ನಾರಿ ಮುನಿದರೆ ಮಾರಿ' ಎಂಬ ಗಾದೆಯಂತೆ ಒಲಿದಾಗ ಅಮ್ಮ ಕಲ್ಪವೃಕ್ಷ; ಮುನಿದಾಗ ಮೃತ್ಯು. ಜಗತ್ತಿನ ಎಲ್ಲ ಕಡೆಗಳಲ್ಲಿಯೂ ಅಮ್ಮನ ಪೂಜೆ ಈ ಎರಡು ವಿಧದಲ್ಲಿ ನಡೆಯುತ್ತದೆ. ಅಮ್ಮನ ಈ ಎರಡು ಮುಖಗಳನ್ನೇ ಜನ ಬೇರೆ ಬೇರೆ ದೇವತೆಗಳ ಹೆಸರಿನಲ್ಲಿ ಪೂಜಿಸಿದ್ದಾರೆ. ಒಂದು ಕಡೆ ಸಾತ್ವಿಕ ದೇವತೆಯಾಗಿ, ಮತ್ತೊಂದು ಕಡೆ ಮಾರಕ ದೇವತೆಯಾಗಿ ಅವಳು ಕಾರ್ಯ ನಿರ್ವಹಿಸಿದ್ದಾಳೆ. ಅಮ್ಮ-ಭೂಮಿ ಮತ್ತು ಸೃಷ್ಟಿ ಇವೆಲ್ಲ ಒಂದೇ. ಇಲ್ಲಿ ಸೃಷ್ಟಿ ಲಯಗಳೆಂಬ ಎರಡು ಸಾರ್ವತ್ರಿಕ ಕ್ರಿಯೆಗಳಿವೆ. ಅಮ್ಮನ ಸೃಷ್ಟಿ ಲಯ ಶಕ್ತಿಗಳೆರಡನ್ನು ಹೇಳಲೆಂದೇ ಅವಳ ಎರಡು ಮುಖಗಳನ್ನು ಬೇರೆ ಬೇರೆಯಾಗಿ ಮಾಡಿಕೊಂಡು ಪೂಜಿಸಿದರೆಂದು ಕಾಣುತ್ತದೆ. ಇದೇ ಊರಮ್ಮ ಮಾರಮ್ಮನಾಗಿ, ಚಾಮುಂಡಿಯಾಗಿ, ದುರ್ಗೆಯಾಗಿ ಕೊನೆಗೆ ಶಿವೆಯಾಗಿದ್ದಾಳೆ. ಅಂದರೆ ಶುಭ ದೇವತೆ ಆಗಿದ್ದಾಳೆ. ಆ ಕಾರಣಕ್ಕಾಗಿಯೇ ಜನ ಮದುವೆಯಾಗುವಾಗ,

ಕಲ್ಯಾಣವೇ ಶಿವನ ಕಲ್ಯಾಣವೇ
ಕಲ್ಯಾಣವೇ ಪಾರ್ವತಿ ಕಲ್ಯಾಣವೇ

ಎಂದು ಸೋಬಾನೆ ಹಾಡುತ್ತಾರೆ.

✪ ✪ ✪

ಕನ್ನಡ ವಿಶ್ವವಿದ್ಯಾಲಯವು ನವಸಾಕ್ಷರರಿಗೆ ಮತ್ತು ಪ್ರಾಥಮಿಕ ಹಂತದಿಂದ ಪದವಿ ಮಟ್ಟದವರೆಗೆ ಉತ್ತಮ ಹಾಗೂ ಉಪಯುಕ್ತವಾದ ಪಠ್ಯಪುಸ್ತಕ [illegible] ಮಾಡುವ ಸಲುವಾಗಿ 'ಪಠ್ಯಪುಸ್ತಕ ರಚನಾ ವಿಭಾಗ'ವನ್ನು ತೆರೆದಿದೆ. ಇದರ ಮೊ[illegible] ನವಸಾಕ್ಷರರಿಗಾಗಿ ಪಠ್ಯಪುಸ್ತಕ ರಚನೆ ಮಾಡಬೇಕೆಂದು ಚಿಂತಿಸುತ್ತಿರುವಾಗ ಬೆ[illegible]ಕ ಶಿಕ್ಷಣ ಇಲಾಖೆ. ನವಸಾಕ್ಷರರಿಗಾಗಿ ಪುಸ್ತಕ ಬರೆಸುವ ತಮ್ಮ[illegible]ಶ್ವವಿದ್ಯಾ[illegible]ಕ್ಕೆ ವಹಿಸಿಕೊಟ್ಟರು. ವಿಶ್ವವಿದ್ಯಾಲಯವು ಈ[illegible]ಡಿನ [illegible]ತ ಲೇಖಕರನ್ನು, ಭಾಷಾತಜ್ಞರನ್ನು, ಶಿಕ್ಷಣ[illegible]ಲ್ಲರ ಅಭಿಪ್ರಾಯ, ಸಲಹೆ, ಸಹಕಾರಗಳನ್ನು ಕೆ[illegible]ಖವಾಯಿತು. [illegible], ಮುದ್ರಣ ವಿನ್ಯಾಸ, ಚಿತ್ರಗಳ ಮಹತ್ವ, ಸಾಹಿತ್ಯ[illegible]ಟ್ಟ ಇತ್ಯಾದಿಗಳನ್ನು ಕುರಿತು [illegible]ನೇಕ ಸಲ ಚರ್ಚಿಸಿ ಯೋಜನೆಯನ್ನು ಅನುಷ್ಠಾನ[illegible] ಸೂಚಿಸಿತು.

ನವಸಾಕ್ಷರರಿಗಾಗಿ ಕನ್ನಡದಲ್ಲಿ[illegible]ದೇಶದ ಇತರ ಭಾಷೆಗಳಲ್ಲಿ [illegible] ಪ್ರಕಟವಾಗಿರುವ ಪುಸ್ತಕಗಳನ್ನೆಲ್ಲ ಒಟ್ಟುಗ[illegible]ಳ ಮಾದರಿ, ಮಾ[illegible]ನ್ನೆಲ್ಲ ಭಾಷಾತಜ್ಞರಿಂದ ಪರಿಶೀಲಿಸಲಾಯಿತು. ಜೊ[illegible]ನುಭವಿ ಕ್ಷೇತ್ರಸಹಾಯಕರನ್ನು ನೇ[illegible]ಕೊಂಡು ಅವರಿಗೆ ಕಮ್ಮಟಗಳನ್ನು ನಡೆಸಿ, [illegible]ಕೊಟ್ಟು, ಅವರನ್ನು [illegible] ಆಯ್ದ ಜಿಲ್ಲೆ, ತಾಲೂಕುಗಳಿಗೆ ಕಳುಹಿಸಿ ಈ[illegible]ಲಿತವರಿಂದ ಮತ್ತು [illegible]ಯುತ್ತಿ[illegible]ವವರಿಂದ ಅದರ ಗುಣದೋಷಗಳ ಬಗ್ಗೆ ಅಭಿ[illegible]ಹಿಸಿ, ಅನಂತರ ಅ[illegible]ನ್ನು ವಿಶ್ವವಿದ್ಯಾಲಯದ ಗಣಕಯಂತ್ರದಲ್ಲಿ ವಿಶ್ಲೇ[illegible]ತ್ರಗಳಿಗೆ ಹೋಗಿ, [illegible]ಾಯಕರು ನೀಡಿದ್ದ ಮಾಹಿತಿಗಳನ್ನೆಲ್ಲ ಮರು [illegible]ಕ್ಷರರ ಅಪೇಕ್ಷೆ[illegible]ಣವಾಗಿ ವಿಷಯದ ಆದ್ಯತೆಗಳನ್ನು ನಿರ್ಧರಿಸಿಕೊ[illegible]ಗಲಾಯಿತು; [illegible]ತ ಲೇಖಕರು ನಮ್ಮ ವಿಶ್ವವಿದ್ಯಾಲಯದ ಪ್ರಾಧ್ಯಾಪ[illegible] ಹಸ್ತಪ್ರತಿಗಳಿಗೆ [illegible] ರೂಪ ಕೊಟ್ಟರು. ಕಲಾವಿದರು ವಿಷಯಗಳಿಗೆ[illegible]ಕೊಟ್ಟರು. ಹೀಗೆ [illegible]ಂತ ಹಸ್ತಪ್ರತಿಗಳನ್ನು ನವಸಾಕ್ಷರರ ಬಳಿ ಕೊಂಡೊ[illegible]ನಂತರ ಅವರ [illegible] ಪ್ರತಿಕ್ರಿಯೆಗಳನ್ನು ಅಳವಡಿಸಿ ಹಸ್ತಪ್ರತಿಯನ್ನು [illegible]

ನಮ್ಮ ಬಹುಸಂಖ್ಯಾತ ಸಮುದಾಯ ಅನಕ್ಷರಸ್ಥರೇ ಹೊರತು ಅವಿದ್ಯಾವಂತರಲ್ಲ. ನೃಪತುಂಗ ಹೇಳುವಂತೆ ಅವರು "ಚದುರರ್ ನಿಜದಿಂ ಕುರಿತೋದದೆಯುಂ ಕಾವ್ಯ ಪ್ರಯೋಗ ಪರಿಣತ ಮತಿಗಳ್". ಅನುಭವದಲ್ಲಿ, ವಿವೇಕದಲ್ಲಿ, ವ್ಯವಹಾರದಲ್ಲಿ, ತಿಳುವಳಿಕೆಯಲ್ಲಿ ಆ ಜನ ಚದುರರು. ಹೀಗೆಂದು ಅವರನ್ನು ಅಕ್ಷರಧಲಿತರನ್ನಾಗಿಯೂ ಉಳಿಸುವಂತಿಲ್ಲ. ಅವರಲ್ಲಿ ಅಕ್ಷರ ಕಲಿಯುವ ಸಾಮರ್ಥ್ಯವಿದೆ. ಕಲಿಸುವ ಹೊಣೆ ಸರ್ಕಾರಗಳ, ವಿಶ್ವವಿದ್ಯಾಲಯಗಳ ಮೇಲಿದೆ. ಈ ನಿಟ್ಟಿನಲ್ಲಿ ದೇಶದಾದ್ಯಂತ ಸಾಕ್ಷರತಾ ಆಂದೋಲನ ನಡೆಯುತ್ತಿದೆ. ಆದರೆ ಈ ಅಕ್ಷರ ಸಂಸ್ಕೃತಿಯ ಆಂದೋಲನದಲ್ಲಿ ಕಲಿತವರಿಗೆ ಮತ್ತು ಕಲಿಯುವವರಿಗೆ ಉತ್ತಮ ಗುಣಮಟ್ಟದ ಪುಸ್ತಕಗಳ ಅವಶ್ಯಕತೆ ಇದೆ. ಕಲಿತವರು ಮರೆಯದಂತೆ, ಕಲಿಕೆಯನ್ನು ಮುಂದುವರಿಸುವಂತೆ ನೋಡಿ ಕೊಳ್ಳುವುದು ಎಲ್ಲರ ಕರ್ತವ್ಯ.

ಕನ್ನಡ ವಿಶ್ವವಿದ್ಯಾಲಯವು ನಾಡಿನ ಹಲವು ವಿದ್ವಾಂಸರೊಂದಿಗೆ ಸೇರಿ ನಡೆಸಿದ ಒಂದು ಸಾಮೂಹಿಕ ಪ್ರಯತ್ನದ ಫಲವಾಗಿ ಈ ಪುಸ್ತಕ ರೂಪತಾಳಿದೆ. ನವಸಾಕ್ಷರರು ಈ ಪುಸ್ತಕವನ್ನು ಪ್ರೀತಿಯಿಂದ ಸ್ವೀಕರಿಸುತ್ತಾರೆಂದು ನಂಬಿದ್ದೇವೆ. ಈ ಯೋಜನೆಯ ಯಶಸ್ಸಿಗೆ ಕಾರಣರಾಗಿರುವ ಉನ್ನತ ಸಲಹಾ ಸಮಿತಿ ಹಾಗೂ ಸಂಪಾದಕ ಸಮಿತಿಯ ಸದಸ್ಯರಿಗೆ, ಲೇಖಕರಿಗೆ, ಕಲಾವಿದರಿಗೆ ಹಾಗೂ ಈ ಯೋಜನೆಯಲ್ಲಿ ಪ್ರತ್ಯಕ್ಷವಾಗಿ, ಪರೋಕ್ಷವಾಗಿ ನಮ್ಮೊಡನೆ ಪಾಲ್ಗೊಂಡವರೆಲ್ಲರಿಗೂ ನಮ್ಮ ಹೃತ್ಪೂರ್ವಕವಾದ ವಂದನೆಗಳು. ನಮ್ಮ ವಿಶ್ವವಿದ್ಯಾಲಯದ ಮೇಲೆ ವಿಶ್ವಾಸವಿಟ್ಟು ಇಂತಹ ಒಂದು ಗುರುತರವಾದ ಯೋಜನೆಯನ್ನು ವಹಿಸಿಕೊಟ್ಟ ಲೋಕಶಿಕ್ಷಣ ಇಲಾಖೆಯ ನಿರ್ದೇಶಕರಾದ ಶ್ರೀ ಲೂಕೋಸ್ ವಲ್ಲತ್ತರೈ ಅವರಿಗೆ ನನ್ನ ಕೃತಜ್ಞತೆಗಳು. ಓದುಗರು ಈ ಪುಸ್ತಕದ ಬಗ್ಗೆ ತಮ್ಮ ಅಭಿಪ್ರಾಯಗಳನ್ನು ತಿಳಿಸಿದರೆ ನಮ್ಮ ಪಠ್ಯಪುಸ್ತಕ ರಚನೆಗೆ ಉಪಯೋಗವಾಗುತ್ತದೆ.

ಚಂದ್ರಶೇಖರ ಕಂಬಾರ
ಕುಲಪತಿಗಳು